ಅ) 17-5-1991ರಂದು ಗುಲ್ಬರ್ಗಾದಲ್ಲಿ ನಡೆದ ಮಾಜಿ ಪ್ರಧಾನಮಂತ್ರಿಗಳ ಸಾರ್ವಜನಿಕ ಸಭೆಯಲ್ಲಿ ಸಾರ್ವಜನಿಕ ಧ್ವನಿವರ್ಧಕ ವ್ಯವಸ್ಥೆಯ ವಿಫಲತೆ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿಯವರಿಂದ ತನಿಖೆಗೆ ಆದೇಶ ನೀಡಲಾಗಿದೆಯೇ ?

ಆ) ಹಾಗಿದ್ದಲ್ಲಿ, ವರದಿಯ ಅಂಶಗಳೇನು ?

ಇ) ಮೇಲಿನ ವರದಿಯ ಮೇಲೆ ತೆಗೆದುಕೊಂಡ ಕ್ರಮಗಳಾವುವು ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಹೌದು.

ತಾರೀಖು 14-5-1991ರಂದು ಈ ಘಟನೆ ಸಂಭವಿಸಿದೆ, ದಿನಾಂಕ 17-5-1991ರಂದು ಅಲ್ಲ.

ಆ) ಇ) ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

+ ಶ್ರೀ ಬಿಎಸ್ ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆ ಕಳಿಸಿದ್ದೆ. ಈ ರಾಜ್ಯದ ರೈತರ ಬಗ್ಗೆ ವಿಶೇಷವಾಗಿ ಕಳೆದ ಎರಡು ವರ್ಷದಿಂದ ರೈತನ ಸಾಲ ಮನ್ನಾ ಯೋಜನೆ ನೆನೆಗುದಿಗೆ ಬಿದ್ದಿದೆ. ಸಹಕಾರಿ ಸಂಘಗಳು ಬಾಗಿಲು ಮುಟ್ಟಿಯಾಗಿದೆ. ಅದಕ್ಕಾಗಿ ಅಧ್ಯಕ್ಷರೇ ನಾನು ಇಂದು ಹೇಳ್ತಾಯಿರೋದು ಸಾಲ ಮನ್ನಾ ಮಾಡ್ತಾರೋ ಇಲ್ಲವೋ ಅನ್ನುವುದು ಸರ್ಕಾರಕ್ಕೆ ಬಿಟ್ಟಿರುವಂಥದು. ಆ ಪ್ರಶ್ನೆ ಅಲ್ಲ. ಆದರೆ ಈಗ ರೈತನಸಾಲ ಮನ್ನಾ ಯೋಜನೆ ನೆನೆಗುದಿಗೆ ಬಿದ್ದಿರೋದ್ರಿಂದ ಹೊಸ ಸಾಲ ಸಹಕಾರ ಸಂಘಗಳಿಂದ ಸಿಗದೇ ಇರುವ ವಿಚಿತ್ರ ಪರಿಸ್ಥಿತಿ ಅವರಿಗೆ ಬಂದಿರುವುದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಲೋಕಸಭಾ ಚುನಾವಣಾ ವೇಳೆಯಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡುವಾಗ 10 ಸಾವಿರದವರೆಗೆ ರೈತಸಾಲ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ರೈತರ ಸಾಲದ ಬಗ್ಗೆ ಒಂದು ನಿರ್ಧಾರ ಕೈಗೊಳ್ಳಬೇಕು. ಅದನ್ನು ಈ ಮನೆಯಲ್ಲಿ ಹೇಳಬೇಕು. ಈ ಬಗ್ಗೆ ತಮಗೊಂದು ಪತ್ರಬರೆದಿದ್ದೇವೆ.

ಶ್ರೀ ಬಿ. ಡಿ. ಚಂದ್ರೇಗೌಡ : ಕರ್ನಾಟಕದಲ್ಲಿ ನಾಯಕತ್ವ ಬದಲು ಎಂದಿದೆ.

(ಗೊಂದಲ)

ಅಧ್ಯಕ್ಷರು : ಯಡಿಯೂರಪ್ಪನವರೇ, ನಿಮ್ಮ ನಿಲುವಳಿ ಸೂಚನೆಯನ್ನು ನೋಡಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ ; ಅದು ನಿಲುವಳಿ ಸೂಚನೆಯಲ್ಲಿ ಸ್ವಾಮಿ, ತಾವುಎಲ್ಲ ಕಲಾಪ ಸಸ್ಪೆಂಡ್ ಮಾಡಿ. ಇಂದು ಸುಮಾರು ನಾಲ್ಕೈದು ಲಕ್ಷ ರೈತರು ತಾವು 10 ಸಾವಿರದ ವರೆಗಿನ ತೆಗೆದುಕೊಂಡ ಸಾಲ ಮನ್ನಾ ಆಗದೆ, ಸನ್ಮಾನ್ಯ ಮುಖ್ಯಮಂತ್ರಿಗಳು ಲೋಕಸಭಾ ಚುನಾವಣಾ ವೇಳೆಯಲ್ಲಿ ಪ್ರವಾಸ ಮಾಡಿದಾಗ ಎಲ್ಲಕಡೆ 10 ಸಾವಿರದವರೆಗಿನ ಸಾಲ ಮನ್ನಾ ಆಗುತ್ತದೆ ನೀವೇನೂ ಚಿಂತೆ ಮಾಡಬೇಕಾಗಿಲ್ಲ ಎಂಬ ಆಶ್ವಾಸನೆ ಕೊಟ್ಟಿದ್ದರು. ನನ್ನ ನಿಲುವಳಿ ಸೂಚನೆಯನ್ನು ಯಾವ ರೂಪದಲ್ಲಿ ಬೇಕಾದರೂ ತೆಗೆದುಕೊಳ್ಳಿ.

ಅಧ್ಯಕ್ಷರು : ಈ ವಿಷಯ ಬಹಳ ಸಾರಿ ಚರ್ಚೆಯಾಗಿದೆ, ಇದಕ್ಕೆ ಬಹಳ ಸಲ ಉತ್ತರ ಕೊಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು : ಕರಿಯಣ್ಣನವರು ಅದೇನೋ ಹೇಳುತ್ತಿದ್ದಾರೆ, ಕೇಳೋಣ ತಡೆಯಿರಿ.

ಶ್ರೀ ಕರಿಯಣ್ಣ : ನಾಲ್ಕು ಜನ ಒಂದೇ ಸಲ ನಿಂತ್ಕೊಂಡು ಮಾತಾಡುವುದಾದರೆ ಈ ಸದನದಲ್ಲಿ ಏನಾದರೂ ನಿಯಮಾವಳಿ ಇದೆಯೇ? ನಾಲ್ಕು ಜನ ಒಂದೇ ಸಲ ಕೂಗಾಡಿದರೆ ಉತ್ತರ ಕೊಡುವುದಕ್ಕೆ ಹೇಗಾಗುತ್ತದೆ?

ಅಧ್ಯಕ್ಷರು : ನಾನು ಕರಿಯಣ್ಣನವರು ಹೇಳೋದನ್ನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಸಾಲ ಮನ್ನಾ ಮಾಡುವುದು ಬಿಡುವುದು ಸರ್ಕಾರಕ್ಕೆ ಬಿಟ್ಟಿದ್ದು ನಾನು ಒತ್ತಾಯ ಮಾಡುತ್ತಾ ಇಲ್ಲ. ನನ್ನದೇನೂ ಅಂದರೆ......

(ಗದ್ದಲ)

ಅಧ್ಯಕ್ಷರು : ಕರಿಯಣ್ಣನವರು ಹೇಳಿದ್ದನು ತಾವು ದಯವಿಟ್ಟು ಪಾಲಿಸಬೇಕು. ನಾಲ್ಕು ಜನ ಒಟ್ಟಿಗೇ ಎದ್ದು ಮಾತಾಡಿದರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನದೇನೂ ಅಂದರೆ ಕಳೆದ ಎರಡೂವರೆ ವರ್ಷದಿಂದ ರೈತರ ಸಾಲ ಮನ್ನಾ ಯೋಜನೆ ಕೇಂದ್ರದ್ದು ಏನಿದೆ ಅದರಿಂದ ನಮ್ಮ ರೈತರಿಗೆ ಅನುಕೂಲ ಆಗುವುದಿಲ್ಲ ಎನ್ನುವುದನ್ನು ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ ಮತ್ತು ಆ ಬಗ್ಗೆ ಪ್ರಧಾನಿಗಳಿಗೂ ಪತ್ರ ಬರೆದಿದ್ದಾರೆ. ಅಷ್ಟರಮಟ್ಟಿಗೆ ಮುಖ್ಯಮಂತ್ರಿಗಳಿಗೆ ಈ ಸರ್ಕಾರಕ್ಕೆ ಕಳಕಳಿ ಇದೆ ಎಂದು ನನಗೆ ಗೊತ್ತಿದೆ. ಆದರೆ ನನ್ನದೇನೂ ಎಂದರೆ ಮುಖ್ಯಮಂತ್ರಿಗಳು ಮೊನ್ನೆ ಲೋಕಸಭಾ ಚುನಾವಣಾ ಸಂದರ್ಭದಲ್ಲಿ ಎಲ್ಲ ಕಡೆ ಒಂದು ಆಶ್ವಾಸನೆ ಕೊಟ್ಟಿದ್ದರು. ಈ ಕಂಡೀಷನ್ ಇರುವುದರಿಂದ ಈ ಸಾಲ ಮನ್ನಾ ಯೋಜನೆ ನಮ್ಮ ರಾಜ್ಯದ ರೈತರಿಗೆ ಅನುಕೂಲವಾಗುತ್ತಿಲ್ಲ. ಆದ್ದರಿಂದ ಅದನ್ನು ತೆಗೆದುಹಾಕಿ. 10 ಸಾವಿರದವರೆಗಿನ ಸಾಲ ಮನ್ನಾ ಮಾಡಿಸುತ್ತೇನೆ. ಆಗುತ್ತದೆ. ಅದನ್ನು ಕಟ್ಟುವ ಅಗತ್ಯವಿಲ್ಲ ಎಂದು ಹತ್ತಾರು ಕಡೆ ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸಿದ್ದೇನೆ, ಇಲ್ಲಿ ಪ್ರಸ್ತಾಪವನ್ನೂ ಮಾಡಿದ್ದೇನೆ. ಪ್ರಧಾನಿಗೆ ನೀವು ಪತ್ರ ಬರೆದಿದ್ದೀರಿ ಆದರೆ ಇಲ್ಲಿ ಸಹಕಾರ ಸಚಿವರು ಹೇಳಿಕೆ ಕೊಡುವಾಗ 10 ಸಾವಿವ ರೂಪಾಯಿಗಳ ವರೆಗಿನ ಸಾಲವನ್ನು ವಸೂಲು ಮಾಡುವುದಿಲ್ಲ ಎಂದು ಭರವಸೆಯನ್ನು ಕೊಟ್ಟಿದ್ದಾರೆ. ಈಗ ರಾಜ್ಯದಾದ್ಯಂತ 10 ಸಾವಿರದವರೆಗಿನ ಸಾಲದ ಬಗ್ಗೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ನೋಟಿಸ್‌ಗಳನ್ನು ಕಳುಹಿಸುತ್ತಿದ್ದಾರೆ. ಬಡ್ಡಿ, ಸುಸ್ತಿಬಡ್ಡಿ ಕೋರ್ಟ್ ದಾವ ಜಾಸ್ತಿಯಾಗುತ್ತಾ ಇವೆ. ಇಲ್ಲಿ 15-20 ನೋಟಿಸ್‌ಗಳಿವೆ. ಸಹಕಾರ ಸಂಘ ಕುಣಿಗಲ್‌ನಲ್ಲಿ ಕೇವಲ 3400 ರೂಪಾಯಿಗಳಿಗೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ನೋಟಿಸ್ ಕೊಟ್ಟು ಕೇಸ್ ಹಾಕಿದ್ದಾರೆ.

ಅಧ್ಯಕ್ಷರು : ನಾಳೆ ರೆವಿನ್ಯೂ ಡಿಮಾಂಡ್ಸ್ ಬರುತ್ತದೆ. ಆಗ ಇದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯಾರಪ್ಪ : ಇಲ್ಲಿ ಸರಕಾರದ ನಿಲುವೇನು? ಇದರಿಂದ ಎರಡು ಸಂಗತಿಯಾಗಿದೆ. ಈ ರೈತರ ಸಾಲ ಮನ್ನಾ ಯೋಜನೆ ಜಾರಿಗೆ ಬರದೇ

ಇರುವುದರಿಂದ ಸಾಲ ಮನ್ನಾ ಆಗುತ್ತದೆಂದು ತಿಳಿದುಕೊಂಡು ಅವರಿಗೆ ಹೊಸ ಬೆಳೆ ಸಾಲ ಸಿಗದೆಲೆ ಅವರು ಕೈಕಟ್ಟಿಕೊಂಡು ಕುಳಿತಿದ್ದಾರೆ. ಕೋ ಆಪರೇಟಿವ್ ಸೊಸೈಟಿಗಳೆಲ್ಲಾ ಬಾಗಿಲು ಮುಚ್ಚಿದ್ದಾವೆ. ಯಾರೇ ಒಬ್ಬ ಸೆಕ್ರೆಟರಿಗೂ ಸಂಬಳ ಕೊಡುವಂಥ ಸ್ಥಿತಿಯಲ್ಲಿ ಇವತ್ತು ಇಲ್ಲ. ಹೊಸದಾಗಿ ಬೆಳೆ ಸಾಲ ಸಿಗುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ತಾವು ಏನು ಲೋಕಸಭಾ ಚುನಾವಣೆಯ ಸಮಯದಲ್ಲಿ ಜನರಿಗೆ ಆಶ್ವಾಸನೆಯನ್ನು ಕೊಟ್ಟಿದ್ದಿರಿ. ಹತ್ತು ಸಾವಿರ ರೂಪಾಯಿ ಸಾಲವನ್ನು ಮನ್ನಾ ಮಾಡಿಸುತ್ತೇವೆ ಎನ್ನತಕ್ಕಂತದ್ದರ ಬಗ್ಗೆ ಪ್ರಧಾನಿವರಿಗೆ ಈ ಓನ್ನೆಲೆಯಲ್ಲಿ ಪತ್ರವನ್ನು ಕೂಡಾ ಬರೆದಿದ್ದೀರಿ. ಆ ಓನ್ನೆಲೆಯಲ್ಲಿ ಇವತ್ತು ಕೇಂದ್ರ ಸರ್ಕಾರ ಸಾಲ ಮನ್ನಾ ಮಾಡಲಿ, ಬಿಡಲಿ ಇವತ್ತು ತಾವು ಮುಂದೆ ಬಂದು ಹತ್ತು ಸಾವಿರ ರೂಪಾಯಿಗಳವರೆಗೆ ಸಾಲ ಮನ್ನಾ ಮಾಡಿ, ಅವನನ್ನು ಋಣಮುಕ್ತನನ್ನಾಗಿ ಮಾಡಿ ಗೌರವದಿಂದ ರೈತಾಪಿ ಕೆಲಸವನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೀರಾ? ಎಂಬುದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ನಿಲುವಳಿ ಸೂಚನೆಗೆ ಸಹಿ ಹಾಕಿದ್ದೇನೆ ಸ್ವಾಮಿ.

ಅಧ್ಯಕ್ಷರು : ನಿಲುವಳಿ ಸೂಚನೆಯನ್ನು ಆಗಲೇ ರಿಜೆಕ್ಟ್ ಮಾಡಿ ಆಗಿದೆ. ಅವರು ಹೇಳಿದ್ದನ್ನೇ ನೀವು ಹೇಳುತ್ತೀರಿ. ಹೊಸದಾಗಿ ಏನು ಹೇಳುತ್ತೀರಿ? ದಯವಿಟ್ಟು ಹೇಳಿ ಏನಾದರೂ ಆಡ್ ಮಾಡುವುದು ಇದ್ದರೆ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಪ್ರತಿಯೊಂದಕ್ಕೂ ಅನೇಕ ಸಾರಿ ಅವರು ಹಳೆಯ ಉತ್ತರವನ್ನು ಕೊಡುತ್ತಿರುತ್ತಾರೆ. ಉತ್ತರವನ್ನು ಹಳೆಯದೇ ಹೇಳುತ್ತಿರುತ್ತಾರೆ. ಹೊಸದು ಏನು ಇದೆ? ಉತ್ತರ ಕೂಡ ಹಳೆಯದೇ ಇರುತ್ತದೆ. ಅದಕ್ಕೆ ಸಮಂಜಸವಾಗಿ ರೈತರ ರಕ್ಷಣೆಗೆ ಸರ್ಕಾರ ಬದ್ಧವಾಗಿದೆ ಎನ್ನತಕ್ಕಂಥ ತೀರ್ಮಾನಕ್ಕೆ ಬರಬೇಕು. ಹೊಸದು ಹೇಳಿ ಎಂದು ತಾವು ಹೇಳಿದರೆ ಉತ್ತರವನ್ನು ಕೇಳಿ ಈಗ ನೋಡೋಣ. ಉತ್ತರ ಹೊಸದು ಬರುತ್ತದೆಂದು ತಾವೇ ನೋಡಿ.

ಒಬ್ಬ ಮಾನ್ಯ ಸದಸ್ಯರು : ಹಳೆಯ ಪ್ರಶ್ನೆಗೆ ಹೊಸ ಉತ್ತರವನ್ನು ಕೊಡುತ್ತಾರೆಯೇ?

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಸಭಾಧ್ಯಕ್ಷರೇ, ಪ್ರಶ್ನೆಗಳು ಕೂಡ ಹಳೆಯದಾಗಿರುವುದರಿಂದ ಹೊಸ ಉತ್ತರವನ್ನು ಕೊಡತಕ್ಕಂಥ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಾವೇ ಹೇಳಿ ಸ್ವಾಮಿ. ಇದನ್ನು ತಾವು ಪರಾಂಬರಿಸಬೇಕು.

ಅಧ್ಯಕ್ಷರು : ನಾನು ಪರಾಂಬರಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ತಾವು ಗಂಭೀರವಾಗಿ ಗಮನಿಸಬೇಕು. ಹಳೆಯ ಉತ್ತರವನ್ನು ಕೊಡಬೇಕಾಗಿದೆ. ಎನ್ನತಕ್ಕಂಥದ್ದನ್ನು ಗಂಭೀರವಾದ ಧಾಟಿಯನ್ನು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಈ ವಿಷಯದ ಬಗ್ಗೆ ಕಳಕಳಿ ಸದನದ ಎಲ್ಲಾ ಮೂಲೆಯಲ್ಲೂ ಎಲ್ಲರಿಗೂ ಕೂಡ ಇದೆ ಎನ್ನತಕ್ಕಂಥ ಮಾತು ಸರ್ವವಿದಿತ. ಪಕ್ಷಾತೀತವಾಗಿ ಕೂಡ ಕಂಡಿದ್ದೇವೆ. ಪದೇ ಪದೇ ಈ ಪ್ರಶ್ನೆ ಬಂದಾಗ ಉತ್ತರವನ್ನು ಕೂಡ ನಾನು ಸ್ಪಷ್ಟವಾಗಿ ಕೊಟ್ಟಿದ್ದೇನೆ. ಕೆಲವು ಷರತ್ತುಗಳನ್ನು ಒಳಗೊಂಡಿರತಕ್ಕಂಥ

ಏನು ಕೇಂದ್ರ ಸರ್ಕಾರವ ಯೋಜನೆಗಳು ಇವೆ ಹತ್ತು ಸಾವಿರ ರೂಪಾಯಿ ಒಳಗಡೆ ಇರತಕ್ಕಂಥ ಸಾಲವನ್ನು ಮನ್ನಾ ಮಾಡತಕ್ಕಂಥ ವಿಚಾರದಲ್ಲಿ ನಾವು ಸ್ಪಷ್ಟವಾಗಿರತಕ್ಕಂಥ ನೀತಿಯನ್ನು ಆಧರಿಸಿ, ನಿಲುವನ್ನು ತಡೆದು ಇಲ್ಲಿ ಪ್ರಕಟ ಮಾಡಿದ್ದೇವೆ. ಈ ಒಂದು ನೀತಿಗೆ ಅನುಗುಣವಾಗಿ - ಕೇಂದ್ರ ಸರ್ಕಾರದವರು ಒಂದು ಆದೇಶವನ್ನು ಕೂಡ ಕಳುಹಿಸಿಕೊಟ್ಟಿದ್ದಾರೆ. ಅವರು ಕಳುಹಿಸಿರತಕ್ಕಂಥದ್ದರಲ್ಲಿ ಅಣೆವಾರಿ, ಕಟ್ ಆಫ್‌ಡೇಟ್ ಇವುಗಳು ಪ್ರಾಮುಖ್ಯವಾಗಿರತಕ್ಕಂಥ ವಿಚಾರ. ಮಾನ್ಯ ಸದಸ್ಯರಿಗೂ ಈ ವಿಚಾರ ಗೊತ್ತಿದೆ. ಇದರ ಬಗ್ಗೆ ಕೆಲವೊಂದು ಬದಲಾವಣೆ ಮಾಡದೇ ಇದ್ದರೆ ಅನೇಕ ಜನ ಏನು ಬಡವರು ಸಾಲವನ್ನು ಪಡೆದರೋ, ಆ ಸಾಲ ಮನ್ನಾ ಯೋಜನೆಯ ಅನ್ವಯ ಕೇಂದ್ರ ಸರ್ಕಾರದ ಆಜ್ಞೆಯ ಪ್ರಕಾರ ಬಹಳ ಜನರಿಗೆ ಅದರ ಸೌಲಭ್ಯ ಸಿಗುತ್ತಿಲ್ಲ ಎನ್ನತಕ್ಕಂಥ ವಿಚಾರದಲ್ಲಿ (ಈಗಲ್ಲ ಶ್ರೀಮಾನ್ ವಿ.ಪಿ. ಸಿಂಗ್‌ರವರು ಪ್ರಧಾನಿ ಮಂತ್ರಿಗಳಾಗಿದ್ದಾಗ) ಮಾನ್ಯ ಚಂದ್ರಶೇಖರ್‌ರವರು ಪ್ರಧಾನಮಂತ್ರಿಗಳಾಗಿದ್ದಾಗ ನಾನು ಖುದ್ದಾಗಿ ಕಂಡು ಅವರಿಗೆ ಪತ್ರ ಕೊಟ್ಟಿದ್ದೇನೆ. ಈಗ ಇರತಕ್ಕಂಥ ಪ್ರಧಾನಿಯವರಿಗೂ ಕೂಡ ಆ ವಿಚಾರವನ್ನು ತಿಳಿಸಿದ್ದೇವೆ. ಅದಕ್ಕೆ ಅವರು ಬೇರೆ ಬೇರೆ ರಾಜ್ಯಗಳ ಅಭಿಪ್ರಾಯವನ್ನು ಕೂಡ ನಾವು ಪಡೆಯುತ್ತೇವೆ ಪಡೆದು ನಿಮಗೆ ತಿಳಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದರ ಮೇಲೆ ನಾವು ಅದಕ್ಕಾಗಿ ಕಾಯುತ್ತಿದ್ದೇವೆ. ಅದರ ಬಗ್ಗೆ ಅಂತಿಮವಾಗಿ ಕೇಂದ್ರ ಸರ್ಕಾರದಿಂದ ಆದೇಶ ಬರಲಿ ಎನ್ನತಕ್ಕಂಥ ದೃಷ್ಟಿಯಿಂದ ನಾವು ಕಾಯುತ್ತಿದ್ದೇವೆ. ಇವತ್ತು ನಮಗೂ ಕಳಕಳಿ ಇದೆ. ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ರೈತರು ಆಜ್ಞೆಯ ಚೌಕಟ್ಟಿನಲ್ಲಿ ಯಾವ ಸೌಲಭ್ಯವನ್ನು ಪಡೆಯಬೇಕು ಇದಕ್ಕೆ ಆ ಒತ್ತಡ ತಮ್ಮದ್ದೂ ಇದೆ. ನಮ್ಮದ್ದೂ ಇದೆ ಎಲ್ಲರೂ ಕೂಡ ಒಂದಾಗಿದ್ದಾರೆ ಎನ್ನತಕ್ಕಂಥ ಮಾತನ್ನು ನಾವು ತಿಳಿಸಿದ್ದೇವೆ. ಈಗಲೂ ಕೂಡ ಮತ್ತೊಂದು ಸಾರಿ ಕೇಂದ್ರ ಸರ್ಕಾರಕ್ಕೆ ನಾವು ಹೇಳುತ್ತಿದ್ದೇವೆ. 21ನೇ ತಾರೀಖು ನಾವುಗಳೆಲ್ಲರೂ ಹೋಗುತ್ತಿದ್ದೇವೆ. ಸರ್ವಪಕ್ಷಗಳವರು ಫರ್ಟಿಲೈಜರ್ ವಿಚಾರದಲ್ಲಿ 21ನೇ ತಾರೀಖು ಮೋಸ್ಟ್‌ಲಿ ಹೋಗುತ್ತಿದ್ದೇವೆ. ಆ ರೀತಿ ಹೋಗತಕ್ಕಂತ ಕಾಲದಲ್ಲಿ ನಾವು ನೀವು ಸೇರಿ ಎಲ್ಲರೂ ಕೂಡ ಮತ್ತೊಮ್ಮೆ ಇದರ ಬಗ್ಗೆ ಒತ್ತಡವನ್ನು ಮಾಡೋಣ. 21ನೇ ತಾರೀಖು ಹೋದಾಗ ಪ್ರಧಾನ ಮಂತ್ರಿಯವರನ್ನು ಹಣಕಾಸು ಸಚಿವರನ್ನು ಭೇಟಿ ಮಾಡುತ್ತಿದ್ದೇವೆ. ಹಾಗೆಯೇ ಅಗ್ರಿಕಲ್ಚರ್ ಮಿನಿಸ್ಟರನ್ನೂ ಕೂಡ ಭೇಟಿ ಮಾಡುತ್ತಿದ್ದೇವೆ. ಆ ಸಂದರ್ಭದಲ್ಲಿ ಇದನ್ನು ಕೂಡ ನಾವು ಒತ್ತಾಯ ಮಾಡೋಣ. ಇದಕ್ಕಿಂತ ಹೆಚ್ಚಿಗೆ ಹೇಳತಕ್ಕಂಥದ್ದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಸದನದಲ್ಲಿ ಕೋ-ಆಪರೇಟಿವ್ ಮಿನಿಸ್ಟರ್ ಹೇಳಿಕೆಯನ್ನು ಕೊಟ್ಟಿದ್ದರು. ಹತ್ತು ಸಾವಿರ ರೂಪಾಯಿಗಳವರೆಗಿನ ಸಾಲವನ್ನು ವಸೂಲು ಮಾಡುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದರು. ತಾವು ಸಹಾ ರಾಜ್ಯದಾದ್ಯಂತ ಹೇಳಿ ಬಂದಿದ್ದೀರಿ. ಇಲ್ಲಿ ನಿಮಗೆ ಸಾವಿರಾರು ನೋಟೀಸುಗಳನ್ನು ಕೊಡುತ್ತೇನೆ. ಒಂದು ಸಾವಿರ ಎರಡು ಸಾವಿರ ಮೂರು ಸಾವಿರ ರೂಪಾಯಿಗಳ ಸಾಲದ ವಸೂಲಿಗಾಗಿ ಇವತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಕೇಸನ್ನು ಹಾಕಿ ಅವರನ್ನು ಕೋರ್ಟ್‌ಗೆ ಅಲೆಯುವಂತೆ ಮಾಡಿದ್ದಾರೆ. ಎರಡು ಸಾವಿರ ರೂಪಾಯಿ ಸಾಲ ತೆಗೆದುಕೊಂಡಿರುವವರು ಮತ್ತೆ ಎರಡು ಸಾವಿರ ರೂಪಾಯಿ ಬಡ್ಡಿ ಹಾಕಿ ಕಟ್ಟತಕ್ಕಂಥ ವಿಚಿತ್ರ ಪರಿಸ್ಥಿತಿ ಇದೆ. ಇದೇನು ಸ್ವಾಮಿ?

ಶ್ರೀ ಎಸ್. ಬಂಗಾರಪ್ಪ : ನಾನು ಇನ್ನೂ ಪೂರ್ತಿಯಾಗಿ ಹೇಳಿಲಿಲ್ಲ, ಅದರ ಬಗ್ಗೆ ನಾನು ಹೇಳುತ್ತಿದ್ದೆ. ತಾವು ಎದ್ದಿರಿ ಎಂದು ನಾನು ಕುಳಿತುಕೊಳ್ಳಬೇಕಾಯಿತು.

ಈ ಮಧ್ಯೆ ಪದೇ ಪದೇ ನಾವು ಹೇಳಿದ್ದೇವೆ. ನಾವು ತಿಳವಳಿಕೆಯನ್ನು ಕೂಡ ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಹತ್ತು ಸಾವಿರ ರೂಪಾಯಿ ಒಳಗಡೆ ಇರತಕ್ಕಂಥ ಸಾಲ ಅಥವಾ ಅದಕ್ಕೂ ಮೇಲೆ ಇರತಕ್ಕಂಥ ಸಾಲವನ್ನು ಕೇಂದ್ರ ಸರ್ಕಾರದ ಆದೇಶದ ಪ್ರಕಾರ ವಸೂಲು ಮಾಡಲೇಬೇಕು.

ಏಕೆಂದರೆ ಹೊಸದಾಗಿ ಸಾಲ ತೆಗೆದುಕೊಂಡಿದ್ದರೆ ಅದು ವಸೂಲು ಆಗಲೇಬೇಕು. 10 ಸಾವಿರ ರೂಪಾಯಿಗಳಿಗಿಂತ ಒಳಗಡೆ ಇರತಕ್ಕ ಸಾಲ ಏನಿದೆ ಆ ಕಾಲಕ್ಕೆ ಆ ಸಾಲಕ್ಕೆ ಸಂಬಂಧಪಟ್ಟಂತೆ ನಮ್ಮ ಅಧಿಕಾರಿಗಳು ಯಾವುದೇ ನೋಟೀಸನ್ನು ಕೂಡ ಕೊಡಬಾರದು, ಕಿರುಕುಳವನ್ನು ಕೊಡಬಾರದು, ಒತ್ತಡದ ವಸೂಲಾತಿಯನ್ನು ಕೂಡ ಮಾಡಬಾರದು ಎನ್ನತಕ್ಕ ವಿಚಾರವನ್ನು ನಾನು ಈಗಾಗಲೇ ತಿಳಿಸಿದ್ದೇನೆ. ಮತ್ತೇನಾದರೂ ಯಾರಿಗಾದರೂ ಗೊತ್ತಿಲ್ಲದೆ ಹೋದರೆ ಅಧಿಕಾರಿಗಳ ಮೇಲೆಯೇ ನಾವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂಬ ಮಾತನ್ನು ಆಗಲೇ ಹೇಳಿದ್ದೇನೆ. ಈಗಲೂ ಅದೇ ಮಾತನ್ನು ಹೇಳುತ್ತೇನೆ. ಮಾನ್ಯ ಯಡಿಯೂರಪ್ಪನವರು, ವಾಟಾಳ್‌ರವರು, ಅಥವಾ ಬೇರೆ ಮಾನ್ಯ ಸದಸ್ಯರು ಯಾರೇ ಇರಬಹುದು. ಅದನ್ನು ಕಳುಹಿಸಿಕೊಟ್ಟರೆ ಸೂಕ್ತವಾದ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾಲ ವಸೂಲಾತಿ ಬಗ್ಗೆ ವಸೂಲು ಮಾಡುವುದರ ಬೇಡ ಎಂದು ಎರಡು ವರ್ಷಗಳಿಂದ ಆಶ್ವಾಸನೆಯನ್ನು ಕೊಡುತ್ತಿದ್ದೀರಿ.

(ಭಾರಿ ಗೊಂದಲ)

ಅಧ್ಯಕ್ಷರು : ಆರ್ಡರ್, ಆರ್ಡರ್....

ಶ್ರೀ ವಾಟಾಳ್ ನಾಗರಾಜ್: ಕರ್ನಾಟಕ ಸರ್ಕಾರದ ನೀತಿ ಏನು? ಕೇಂದ್ರ ಸರ್ಕಾರ ಒಪ್ಪಲಿ ಬಿಡಲಿ, ಆ ಪ್ರಶ್ನೆ ಬೇರೆ ಕರ್ನಾಟಕ ಸರ್ಕಾರದ ನೀತಿ ಏನು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

(ಭಾರಿ ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಕರ್ನಾಟಕ ಸರ್ಕಾರದ ಪಾಲೇನು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಮಗೆ ಗೊತ್ತಿರುವ ಹಾಗೆ ಸಾಲ ವಸೂಲಾತಿಯನ್ನು ಮುಂದೂಡುವುದರಿಂದ ಸಮಸ್ಯೆಯು ಬಗೆಹರಿಯುವುದಿಲ್ಲ. 5 ಸಾವಿರ ರೂಪಾಯಿ ಇದ್ದಂತಹ ಸಾಲ ಬಡ್ಡಿ ಸೇರಿ 10 ಸಾವಿರ ಆಗಿದೆ. ಹೊಸ ಬೆಳೆ ಸಾಲ ಸಿಗುತ್ತಿಲ್ಲ. ಸಾಲ ಮನ್ನಾ ಆಗುತ್ತದೆ ಎಂಬ ಮಾನ್ಯ ಮುಖ್ಯಮಂತ್ರಿಯರ ಆಶ್ವಾಸನೆಯಂತೆ ಜನ ಕೈಕಟ್ಟಿಕೊಂಡು ಕುಳಿತಿದ್ದಾರೆ. ಕೃಷಿ ಕಾರ್ಯಕ್ಕೆ ಹಣ ಸಿಕ್ಕುತ್ತಿಲ್ಲ. ಬೆಳೆ ಸಾಲ ಸಿಕ್ಕುತ್ತಿಲ್ಲ. ಈ ಪರಿಸ್ಥಿತಿಯಲ್ಲಿ ರೈತನು ಬದುಕುವುದು ಹೇಗೆ? ತಾವು ಆಶ್ವಾಸನೆ ಕೊಟ್ಟಮೇಲೆ ಸಾಲ ವಸೂಲಾತಿಗೆ ತಡೆಯಾಜ್ಞೆಯನ್ನು ಕೊಟ್ಟರೆ ನಾಳೆ ದಿವಸ ಅದರಿಂದ ರೈತರಿಗೆ ಏನು ಲಾಭ ಆಗುತ್ತದೆ. ಹೊಸ ಸಾಲ ಸಿಗುತ್ತದೆಯೇ? ಬೆಳೆ ಸಾಲ ಸಿಗುತ್ತದೆಯೇ? ಬಡ್ಡಿ ಜಾಸ್ತಿಯಾಗಿರುವುದು ಕಡಿಮೆ ಆಗುತ್ತದೆಯೇ? ಇಂತಹ ಒಂದು ವಿಚಿತ್ರ ಪರಿಸ್ಥಿತಿಯಲ್ಲಿ ಇದೆ. ಎಲ್ಲಾ ಕೋ-ಆಪರೇಟಿವ್ ಸೊಸೈಟಿಗಳು ಬಾಗಿಲನ್ನು ಹಾಕಿವೆ. ಕೋ-ಆಪರೇಟಿವ್ ಮೂಮೆಂಟ್ ಹಾಳಾಗಿ ಹೋಗುತ್ತಿದೆ. ನಮ್ಮ ಪಾಪದಿಂದ ಇವತ್ತು ರೈತಾಪಿ ಸಮುದಾಯ ಹಾಳಾಗುತ್ತಿದೆ. ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಾ? ಹಿಂದೆ ಇದ್ದಂತಹ ಕೇಂದ್ರ ಸರ್ಕಾರ ಅನೇಕ ಬಾರಿ ದೇಶದ ರೈತನ

ಕುರಿತು 10 ಸಾವಿರ ಸಾಲ ಇರತಕ್ಕ ರೈತ ಇರಬಹುದು. ನೇಕಾರ ಇರಬಹುದು. ಕೃಷಿ ಕಾರ್ಮಿಕ ಇರಬಹುದು. ಅವನ ಸಾಲವನ್ನು ಮನ್ನಾ ಮಾಡುತ್ತೇವೆಂದು ಭರವಸೆ ಕೊಟ್ಟರು.

ಅಧ್ಯಕ್ಷರು : ನೀವು ಪುನಃ ಪದೇ ಪದೇ ಅದನ್ನೇ ಹೇಳುತ್ತಿದ್ದೀರಾ.

(ಗೊಂದಲ)

ಅಧ್ಯಕ್ಷರು : ನೀವೆಲ್ಲ ದೆಹಲಿಗೆ ಹೋಗುತ್ತಿದ್ದೀರಿ, ದೆಹಲಿಯಲ್ಲಿ ಈ ವಿಚಾರವೆಲ್ಲವನ್ನು ಕೂಲಂಕುಷವಾಗಿ ಚರ್ಚೆ ಮಾಡಿ ತೀರ್ಮಾನ ಮಾಡಿ..

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ ಇದರಲ್ಲಿ ಮೂರು ನೋಟೀಸ್‌ಗಳಿವೆ.

ಅಧ್ಯಕ್ಷರು : ಅವರಿಗೆ ಎಲ್ಲವನ್ನು ಕಳುಹಿಸಿಕೊಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರಿಂದ ಏನು ಉಪಯೋಗ

ಅಧ್ಯಕ್ಷರು : ಉಪಯೋಗ ಇಲ್ಲದೆ ಇದ್ದರೆ ನೀವೇ ಇಟ್ಟುಕೊಳ್ಳಿ.

(ಭಾರಿ ಗೊಂದಲ)

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರೇ ನೀವು ಕುಳಿತುಕೊಳ್ಳಿ. ನಿಮ್ಮ ಲೀಡರ್ ಎದ್ದುನಿಂತಿದ್ದಾರೆ. ನೀವು ಕುಳಿತುಕೊಳ್ಳಿ.

(ಭಾರಿ ಗೊಂದಲ)

ಅಧ್ಯಕ್ಷರು : ಈಗ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾವು ಈಗಾಗಲೇ ನಿರ್ದೇಶನವನ್ನು ಕೊಟ್ಟಿದ್ದೇವೆ. ಆ ಕಟಾಫ್ ಡೇಟ್ ಏನಿದೆ ಅದಕ್ಕೆ ಹಿಂದೆ ಯಾರು ಸಾಲ ಪಾವತಿ ಮಾಡಿಲ್ಲ ಅವರ ಮೇಲೆ ಬಲತ್ ಬಂಧನದಿಂದ ನಾವು ವಸೂಲು ಮಾಡಬಾರದೆಂದು ನಿದರ್ಶನ ಕೊಟ್ಟಿದ್ದೇವೆ. ಅದನ್ನು ಉಲ್ಲಂಘನೆ ಮಾಡುತ್ತಿರತಕ್ಕ ನಿರ್ದೇಶನಗಳು ಇದ್ದರೆ ನನ್ನ ಗಮನಕ್ಕೆ ತಂದರೆ ನಾನು ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನುವಂತಹ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದು ರೆಕಾರ್ಡ್‌ಗೆ ಹೋಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್, ಜಮಖಂಡಿ ಇವರು 5-1-91ರಲ್ಲಿ 100 ಜನಕ್ಕೆ ನೋಟೀಸ್ ಕೊಟ್ಟು ಅವರ ಆಸ್ತಿ ಜಪ್ತಿ ವಾರೆಂಟ್ ಕೊಟ್ಟಿದ್ದಾರೆ. ಆಸ್ತಿ ವಗೈರೆ ಹರಾಜಾಕುವಂತಹ ಸ್ಥಿತಿಗೆ ತಂದಿದ್ದಾರೆ.

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್ : ತಮಗೆ ಏನು ಹೇಳುತ್ತಿರುವುದು ಅದು ಅರ್ಥಕ್ಕೆ ನಿಂತು ಹೋಗಿದೆ.

(ಭಾರಿ ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಈ ರಾಜ್ಯದ ರೈತರ ಪರವಾಗಿ....

ಶ್ರೀ ವಾಟಾಳ್ ನಾಗರಾಜ್ : ಇದು ಪ್ರಚಾರಕ್ಕೋಸ್ಕರ ಸ್ವಾಮಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಈ ರಾಜ್ಯದ ರೈತರ ಪರವಾಗಿ, ನಮ್ಮ ಸರ್ಕಾರ ಸಾಲ ಮನ್ನಾ ಮಾಡಿದೆ ಎಂದು ಹೇಳಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ರೈತರ ಬಗ್ಗೆ ನಾವು ಏನು ಕೇಳಲೇ ಬಾರಾದಾ?

(ಗೊಂದಲ)

ಅಧ್ಯಕ್ಷರು : ಈಗ ಮುಖ್ಯಮಂತ್ರಿಗಳು ಹೇಳಿದ್ದು ಆಗಿದೆ. ನೀವು ಹೇಳಿದ್ದು ಆಗಿದೆ. ಮುಂದಿನ ವಿಚಾರಕ್ಕೆ ಹೋಗೋಣ.

(ಗೊಂದಲ)

12.45 ಪಿ.ಎಂ.

ಶ್ರೀ ಕೆ.ಎಸ್. ಈಶ್ವರಪ್ಪ : ಮುಖ್ಯ ಮಂತ್ರಿಯವರು ತಮ್ಮ ಸ್ಥಾನದಲ್ಲಿ ಕುಳಿತುಕೊಂಡಿರುವುದು ಆಶ್ವಾಸನೆ ಕೊಡುವುದು ಇಷ್ಟೇ ಆಗಿದೆ. ರೈತರಿಗೆ ಅನ್ಯಾಯವಾಗುತ್ತದೆ. ರೈತರ ಸಾಲ ಮನ್ನಾ ಮಾಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮುಖ್ಯ ಮಂತ್ರಿಯವರ ಮೇಲೆ ವೈಯಕ್ತಿಕವಾಗಿ ನಾವು ಆಪಾದನೆ ಮಾಡುತ್ತಿಲ್ಲ. ಇದು ವೈಯಕ್ತಿಕವಾದ ಆರೋಪಣೆ ಅಲ್ಲ. ಮುಖ್ಯ ಮಂತ್ರಿಯಾವರು ಪ್ರಾಮಾಣಿಕವಾಗಿ....

ಅಧ್ಯಕ್ಷರು : ಇವರು ಏನು ಹೇಳುತ್ತಿದ್ದಾರೆ. ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮುಖ್ಯ ಮಂತ್ರಿಯವರ ಧೋರಣೆ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ನಾವು ಧರಣಿ ಕುಳಿತುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಅಧ್ಯಕ್ಷರೆ, ತಾವು ಅಧ್ಯಕ್ಷರಾಗಿ ಕುಳಿತಾಗಿನಿಂದಲ್ಲೂ ನಾವು ಇದನ್ನು ಪ್ರಸ್ತಾಪ ಮಾಡಿದ್ದೇವೆ. ಬೇರೆ ರಾಜಕೀಯ ಪಕ್ಷಗಳು ಪ್ರಸ್ತಾಪ ಮಾಡಿದೆ. ತಾವು ಆಶ್ವಾಸನೆ ಕೊಟ್ಟು ಕೊಂಡು ಬಂದಿರಿ. ಮೊನ್ನೆ ನಡೆದ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಹಲವಾರು ಸಾರ್ವಜನಿಕ ಸಭೆಗಳಲ್ಲಿ ರೈತರಿಗೆ ಕೊಟ್ಟಿರುವಂಥ ಪತ್ತು ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಅದನ್ನು ಮಾಡಿದ್ದಾರೆಯೇ?

ಅಧ್ಯಕ್ಷರು : ಇದ್ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ ; ಯಾರೊಬ್ಬರ ಮೇಲೂ ನಾವು ವೈಯಕ್ತಿಕವಾಗಿ ಆರೋಪಣೆ ಮಾಡುತ್ತಿಲ್ಲ. ಇದು ಸರ್ಕಾರದ ನೀತಿಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾವು ಧರಣಿ ಕುಳಿತುಕೊಳ್ಳುತ್ತಿದ್ದೇವೆ.

(ಮಾನ್ಯ ಬಿಜೆಪಿ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು) : ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಯವರು ರೈತ ಸಂಘದ ಜೊತೆಯಲ್ಲಿ ಮಾತನಾಡುವಾಗ ನಾನು ಇದರ ಬಗ್ಗೆ ಸಂಪೂರ್ಣವಾಗಿ ಸಹಕಾರವನ್ನು ಕೊಡುತ್ತೇನೆ. ಕೇಂದ್ರ ಸರ್ಕಾರದ ಜೊತೆ ಮಾತುಕತೆ ಮಾಡುತ್ತೇನೆಂದು ಹೇಳಿದ್ದರು. ಕೇಂದ್ರ ಸರ್ಕಾರದ ಜೊತೆ ಮಾತನಾಡಲು ಇವರಿಗೆ ಶಕ್ತಿ ಇರಲಿಲ್ಲವೇ? ಕೇಂದ್ರ ಸರ್ಕಾರದ ಜೊತೆ ಮಾತನಾಡಲು ಪ್ರಯತ್ನ ಮಾಡಲಾಯಿತೆ ಎನ್ನುವ ಸ್ಪಷ್ಟವಾದ ನಿಲುವನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕಿತ್ತು. ಇಲ್ಲಿಯವರೆಗೆ ಅವರು ಏತಕ್ಕೆ ಸುಮ್ಮನೆ ಕುಳಿತರು ಎಂದು ಗೊತ್ತಾಗುತ್ತಿಲ್ಲ. ಇವರ ಪಣೆಬರಹದಲ್ಲಿ ರೈತರ ಸಾಲವನ್ನು ಮನ್ನಾ ಮಾಡುವುದು ಬರೆದಿಲ್ಲವೆಂದು ಕಾಣುತ್ತದೆ. ರೈತರ ಸಾಲ ಮನ್ನಾ ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಮಾತುಕತೆ ಇನ್ನೂ ಮಾಡಿಲ್ಲವೆಂದು ಕಾಣುತ್ತದೆ. ಇದರ ಬಗ್ಗೆ ಮುಖ್ಯಮಂತ್ರಿಯವರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿ) :ಮಾನ್ಯ ಅಧ್ಯಕ್ಷರೇ ಈ ಮಾತನ್ನು ನಾನು ಪದೇ ಪದೇ ಹೇಳಿದ್ದೇನೆ. ಇದು ಕೇಂದ್ರ ಸರ್ಕಾರದ ತೀರ್ಮಾನ. ಇದು ರಾಷ್ಟ್ರಕ್ಕೇ ಮಾಡಿರುವ ಒಂದು ತೀರ್ಮಾನ. ಈ ನೀತಿ ಯಾವ ರಾಜ್ಯದಲ್ಲಿ ಯಾವ ಪಕ್ಷದ ಸರ್ಕಾರ ಇದ್ದರೂ ಅನ್ವಯಿಸುತ್ತದೆ. ಇದು ನಮ್ಮ ಕರ್ನಾಟಕ ರಾಜ್ಯಕ್ಕೂ ಅನ್ವಯಿಸುತ್ತದೆ. ಕರ್ನಾಟಕ ರಾಜ್ಯಕ್ಕೆ ಪ್ರತ್ಯೇಕವಾಗಿ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ರೈತರ ಸಾಲವನ್ನು ಕರ್ನಾಟಕ ಸರ್ಕಾರವು ಮನ್ನಾ ಮಾಡಬೇಕೆಂದು ಮಾನ್ಯ ಬಿಜೆಪಿ ಸದಸ್ಯರು ಹೇಳಿದರೆ ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ಇದು ನಮ್ಮ ಹಣೆಬರಹದಲ್ಲಿ ಅಲ್ಲ. ನಿಮ್ಮನ್ನು ಇಲ್ಲಿ ಕೂಡಿಸಿದರೂ ನಿಮ್ಮ ಹಣೆಬರಹದಲ್ಲೂ ಮಾಡುವುದಕ್ಕೆ ಬರುವುದಿಲ್ಲ. ಶ್ರೀ ಬಾಬಾಗೌಡ ಪಾಟೀಲ್‌ರವರು ಇದನ್ನು ದಯಮಾಡಿ ತಿಳಿದುಕೊಳ್ಳಬೇಕಾಗಿದೆ. ಕೇಂದ್ರ ಸರ್ಕಾರದ ಈ ನೀತಿಯನ್ನು ಎಲ್ಲಾ ರಾಜ್ಯ ಸರ್ಕಾರದವರನ್ನು ಸೇರಿಸಿಕೊಂಡು ಮಾಡಿರುವಂಥದ್ದು. ಇದಕ್ಕೆ ಎಲ್ಲಾ ರಾಜ್ಯ ಸರ್ಕಾರದವರೂ ತಲೆಬಾಗಬೇಕಾಗಿದೆ. ಈ ಮಾತನ್ನು ನಾನು ಮೂಲಭೂತವಾಗಿ ಹೇಳಿದೆ. ತಾವು ಅರ್ಥಮಾಡಿಕೊಂಡಿರೋ ಏನೋ ಗೊತ್ತಿಲ್ಲ. ಇದರ ಜೊತೆಯಲ್ಲಿ ನಾನು ಹೇಳಿದ್ದೇನೆ. ಈ ತಿಂಗಳ 21ನೇ ತಾರೀಖು ನಾವು ನೀವು ಎಲ್ಲಾ ಪಕ್ಷದವರೂ ಸೇರಿಕೊಂಡು ಕೇಂದ್ರ ಸರ್ಕಾರದ ಜೊತೆ ಮಾತುಕತೆಗೆ ಹೋಗೋಣ ಎಂದು. ಇದಕ್ಕಾಗಿ ಇನ್ನೊಂದು ಪತ್ರ ಬರೆಯೋಣ ಎಂದು ಕೂಡ ಹೇಳಿದ್ದೇನೆ. ಪ್ರಧಾನಮಂತ್ರಿಯವನ್ನು ಹಣಕಾಸು ಸಚಿವರನ್ನೂ ಅಗ್ರಿಕಲ್ಚರ್ ಮಿನಿಸ್ಟರ್‌ರವರನ್ನು ಕಂಡು ಮಾತನಾಡೋಣ ಎನ್ನುವ ವಿಷಯವನ್ನು ಹೇಳಿದ್ದರೂ ಕೂಡ ನಾವು ಧರಣಿ ಮಾಡಿ ತೋರಿಸುತ್ತೇವೆ ಎಂದರೆ ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಸದಸ್ಯರಿಗೆ ಮಾತ್ರ ರೈತರ ಸಮಸ್ಯೆಯ ಬಗ್ಗೆ ಕಳಕಳಿ ಇರುವುದು ಬೇರೆಯವರಿಗೆ ಇಲ್ಲವೇ? ನಮ್ಮ ಸರ್ಕಾರಕ್ಕೆ ರೈತರ ಬಗ್ಗೆ ಕಳಕಳಿ ಇಲ್ಲವೇ? ಇದು ನನಗೆ ಅರ್ಥವಾಗುತ್ತಿಲ್ಲ. ನಮಗೆಲ್ಲಾ ರೈತರ ಬಗ್ಗೆ ಬಹಳವಾದ ಕಳಕಳಿ ಇದೆ. ಅವರ ಸಮಸ್ಯೆಯನ್ನು ನಾವು ಅರಿತಿದ್ದೇವೆ. ರೈತ ಕುಟುಂಬದಲ್ಲೇ ನಾವೂ ಹುಟ್ಟಿರುವುದು. ಇದನ್ನು ನೀವು ಪ್ರತ್ಯೇಕವಾಗಿ ಏತಕ್ಕೆ ಹೇಳುತ್ತಿದ್ದೀರೋ ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ನಿಮ್ಮದು ಬಹಳ ತಪ್ಪು ಕಲ್ಪನೆ. ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ರೈತ ಸಂಘದವರು ಇದು ನಮ್ಮ ಹಣೆಬರಹದಲ್ಲಿ ಬರೆದಿಲ್ಲವೆಂದು ಹೇಳಿದ್ದಾರೆ. ಇದನ್ನು ಮಾಡಲು ನಿಮ್ಮ ಹಣೆಬರಹದಲ್ಲೂ ಆಗುವುದಿಲ್ಲ.

ಅಷ್ಟು ಸುಲಭವಾಗಿ ಇರುವಂಥ ವಿಚಾರವಲ್ಲ ಇದು. ರೈತರ ಬಗ್ಗೆ ಕಳಕಳಿ ತಮಗೆ ಎಷ್ಟಿದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೂ ಇದೆ. ಅದಕ್ಕಿಂತ ನೂರರಷ್ಟು ಹೆಚ್ಚು ಸರ್ಕಾರಕ್ಕೆ ಇದೆ. ಕಳೆದ ಲೋಕಸಭೆ ಚುನಾವಣೆಯ ಸಮಯದಲ್ಲಿ ನಾವು ಹೇಳಿದ್ದೇವೆ. ನಿಜ. ಆದರೆ ಏನು ಹೇಳಿದ್ದೇವೆ ಎಂದರೆ, ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದಿದ್ದೇವೆ. ಏನು ಷರತ್ತುಗಳಿವೆ ಅದನ್ನು ದಯಮಾಡಿ ಬದಲಾವಣೆ ಮಾಡಬೇಕು ಎನ್ನುವ ವಿಚಾರದಲ್ಲಿ ಹೇಳಿದ್ದೇವೆ. ಸಾಲವನ್ನು ಮನ್ನಾ ಮಾಡಿದ್ದೇವೆ ಎಂದು ಭಾಷಣ ಮಾಡಿಲ್ಲ. ಚುನಾವಣೆಗೆ ಮೊದಲೂ ಈ ಮಾತನ್ನು ಹೇಳಿದ್ದೇನೆ. ಚುನಾವಣೆಯ ಸಮಯದಲ್ಲೂ ಈ ಮಾತನ್ನು ಹೇಳಿದ್ದೇನೆ. ಈಗಲೂ ಅದೇ ಮಾತನ್ನು ಹೇಳುತ್ತೇನೆ. ಮುಂದೆ ಕೂಡ ಅದನ್ನೇ ಹೇಳುತ್ತೇನೆ. ಬಿಜೆಪಿಯ ಮಾನ್ಯ ಮಿತ್ರರು ನೀವು ಏನು ಮಾಡಿದ್ದೀರಿ ಎಂದು ಕೇಳಿದ್ದಾರೆ. ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಅವರುಗಳು ಧರಣಿ ಮಾಡಿಯೇ ನಾವು ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಿಚ್ಛಿಸುತ್ತೇವೆ ಎಂದರೆ ಅದಕ್ಕೆ ನಿಯಮಗಳು ಇವೆ. ಅಧ್ಯಕ್ಷರು ಇದ್ದಾರೆ. ಸದನ ಇದೆ ಅದರ ಬಗ್ಗೆ ಏನು ಮಾಡಬೇಕು ಎನ್ನುವುದನ್ನು ಸದನಕ್ಕೆ ಅಧ್ಯಕ್ಷರಿಗೆ ಬಿಡುತ್ತೇನೆ. ರೈತರ ಬಗ್ಗೆ ಕಳಕಳಿ ವಿಚಾರದಲ್ಲಿ ಮಾತ್ರ ನಾನು ನಿಮಗಿಂತ ಕಡಿಮೆ ಕಳಕಳಿ ಏನು ಹೊಂದಿಲ್ಲ. ನಮ್ಮ ಜೊತೆ ಇಷ್ಟು ದಿವಸ ಮಾತನಾಡಿದ ರೈತರ ಸಂಘದವರು ನೀವು ಈಗಾಗಲೇ ಅರ್ಥಮಾಡಿಕೊಂಡಿದ್ದೀರೆಂದು ನನ್ನ ಭಾವನೆ. ಅರ್ಥಮಾಡಿಕೊಳ್ಳದೆ ಹೋದರೆ ನಾನೇನು ಮಾಡುವುದಕ್ಕಾಗುವುದಿಲ್ಲ. ನಿಮ್ಮ ಹಣೆಬರಹ ನಿಮಗೆ ನಮ್ಮ ಹಣೆಬರಹ ನಮಗೆ. ನಾವು ಕೂಡಾ ಕರ್ನಾಟಕ ರಾಜ್ಯದ ರೈತರ ಪರವಾಗಿದ್ದೇವೆ. ನಾವು ಅನೇಕ ಸಾರಿ ತೀರ್ಮಾನ ಮಾಡಿದ್ದೇವೆ. ಕೆಲವನ್ನು ಪ್ರಕಟ ಮಾಡಿದ್ದೇವೆ. ಯಾರು ಮಾಡದೇ ಇರತಕ್ಕಂಥ ಕೆಲವು ಸಾಲಗಳನ್ನು ನಾವು ಪ್ರಕಟ ಮಾಡಿದ್ದೇವೆ. ಇನ್ನೂ ಕೂಡ ಮಾಡುವವರಿದ್ದೇವೆ. ಈಗ ಸದನ ಮುಗಿಯುವುದರೊಳಗೆ ಕೆಲವು ವಿಚಾರಗಳನ್ನು ನಾವು ಹೇಳುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. case filled against farmers ಆದರೂ ಕೂಡ ಸದನ ಮುಗಿಯುವುದರೊಳಗೆ ಪಟ್ಟಿ ಓದಿ ಹೇಳುತ್ತೇನೆಂದು ಹೇಳಿದ್ದೇನೆ. ಇನ್ನೇನು ಮಾಡಿಬೋಕೋ ನನಗಂತೂ ಗೊತ್ತಾಗುತ್ತಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮುಖ್ಯಮಂತ್ರಿಯವರು ಉದ್ವೇಗದಿಂದ ಮಾತನಾಡುತ್ತಿದ್ದಾರೆ. ಏನೆಂದು ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ : ಬಾಬಾಗೌಡ ಪಾಟೀಲರ ಮುಖಾಂತರ ನಾನು ನಿಮಗೂ ಹೇಳುತ್ತಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನಿಮ್ಮ ಹಣೆಬರಹ ಏನೆಂದು ನಮಗೂ ಗೊತ್ತಿದೆ.

ಶ್ರೀ ಎಸ್. ಬಂಗಾರಪ್ಪ : ನಮಗೆ ನಿಮ್ಮ ಹಣೆಬರಹ ಏನೆಂದು ಗೊತ್ತಿಲ್ಲವೆ.

ಅಧ್ಯಕ್ಷರು : ಹಣೆಬರಹ ಬ್ರಹ್ಮ ಒಬ್ಬನಿಗೆ ಗೊತ್ತು. ಬಾಕಿಯವರಿಗೆ ಯಾರಿಗೆ ಗೊತ್ತಿದೆ? ಅವನು ಹೇಳಿಕೇಳಿ ಬರೆಯುವುದಿಲ್ಲ ಬರೆದಿಟ್ಟು ಅಲಕ್ ನಿರಂಜನ್ ಎಂದು ಕುಳಿತಿದ್ದಾನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮುಖ್ಯಮಂತ್ರಿಗಳು ಹೇಳಿದಂತೆ ಅವರೊಬ್ಬರಿಂದ ಇದು ಸಾಧ್ಯವಿಲ್ಲವೆಂದು ನಮಗೆ ಗೊತ್ತಿದೆ. ಎಲ್ಲಾ ರಾಜ್ಯ ಸರ್ಕಾರಗಳು ಒತ್ತಾಯ ತರಬೇಕೆನ್ನುವ ಮಾತನ್ನು ಹೇಳುತ್ತಿದ್ದಾರೆ. ಅದನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ.

ನಾನು ಏತಕ್ಕೆ ಎದ್ದು ನಿಂತು ಎಂದರೆ, ಇಂಥ ಒಂದು ಪ್ರಯತ್ನವಾಗಬೇಕು. ಕರ್ನಾಟಕ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಮಾಡಬೇಕು ಎನ್ನುವಂತಹ ಆಸಕ್ತಿ ಇದೆ. ಪತ್ರ ಬರೆದಿದ್ದೇವೆ ಅಂದರೆ ಅಷ್ಟಕ್ಕೆ ಕೆಲಸವಾಗುವುದಿಲ್ಲ, ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಕಳೆದ ಅಧಿವೇಶನಕ್ಕೂ ಈ ಅಧಿವೇಶನಕ್ಕೂ ನಡುವೆ ಕೆಲವು ಸದಸ್ಯರು ಹೇಳುತ್ತಿದ್ದರು. ಮಧ್ಯಪ್ರದೇಶದಲ್ಲಿ ಮತ್ತು ರಾಜಸ್ಥಾನದಲ್ಲಿ ಏನೋ ಮಾಡಿದ್ದಾರೆಂದು ಹೇಳುತ್ತಿದ್ದರು. ನಾನು ಏನು ಮಾಡಿದ್ದಾರೆಂದು ತಿಳಿದುಕೊಂಡು ಬರುವುದಕ್ಕೋಸ್ಕರ ಎರಡು ರಾಜ್ಯಗಳಿಗೂ ಹೋಗಿ ಬಂದೆ. ಶುದ್ಧ ಸುಳ್ಳು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ರೈತರ ಬಗ್ಗೆ.

(ಗೊಂದಲ)

ನಿಜವಾದ ಕಳಕಳಿ ಇರುವವರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಅದನ್ನು ಬಿಟ್ಟು ಸುಳ್ಳು ಹೇಳಿ ಪ್ರಚಾರ ಪಡೆದುಕೊಳ್ಳುವುದು ಸರಿಯಲ್ಲ, ನಾನು ರಾಜಾಸ್ತಾನಕ್ಕೆ ಮತ್ತು ಮಧ್ಯಪ್ರದೇಶ ರಾಜ್ಯಗಳಿಗೆ ಉದ್ದೇಶಪೂರ್ವಕವಾಗಿಯೇ ಹೋಗಿದ್ದೆ. ಇವರು ಹೇಳಿದ ರೀತಿ ಅಲ್ಲಿ 400 ಕೋಟಿ ಸಾಲ ರದ್ದಾಗಿಲ್ಲ.ಏನೂ ಆಗಿಲ್ಲ. ನಾನು ಅಂಕಿ-ಅಂಶಗಳನ್ನು ತಂದಿದ್ದೇನೆ.

Mr.Speaker : I would like to give one important ruling.

ಈಗ ಏನಾಗಿದೆಯೆಂದರೆ, Parliamentary,Unparliamentary-artifical demarcation. ಈವರೆಗೆ ಏನು ಮಾಡಿದ್ದೇವೆ ಎಂದರೆ ಸತ್ಯದಿಂದ ದೂರ ಇದು ಅಸತ್ಯ ಎಂದು ಹೇಳುತ್ತೇವೆ. ಅದರ ಬದಲು ನೇರವಾಗಿ ಸುಳ್ಳು ಎನ್ನುತಕ್ಕಂಥ ಪದಪಾರ್ಲಿಮೆಂಟರಿ, ಈ ಪದವನ್ನು ಧಾರಾಳವಾಗಿ ಉಪಯೋಗಿಸಿ. This is my considered ruling.... I don't believe in artifical demaraction.

ಅದು ಅಸತ್ಯವೆಂದು ಏತಕ್ಕೆ ಉಪಯೋಗಿಸುತ್ತಿದ್ದೀರಿ? ಸುಳ್ಳು .ಎಂದು ಉಪಯೋಗಿಸೋಣ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಅಸತ್ಯ ಎನ್ನುವುದು ಸಂಸ್ಕೃತಪದ ನನಗೆ ಸಂಸ್ಕೃತ ಪದ ಬರುವುದಿಲ್ಲ.

ಅಧ್ಯಕ್ಷರು : ಅಪ್ಪಟ ಕನ್ನಡ ಪದ 'ಸುಳ್ಳು' ಇದನ್ನು ಉಪಯೋಗಿಸಿ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಬೇಕು. ಕುಳಿತುಕೊಳ್ಳಬೇಕು. ಈಗ ನನ್ನ ಪರವಾನಿಗೆ ಇಲ್ಲದೆ ಇದಿನಬ್ಬರವರು ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಸನ್ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಕಳೆದ ಒಂದು ವರ್ಷದಿಂದ ಇದ್ದೇ ಇದೆ. ಇದರಿಂದ ಏನಾಗಿದೆ ಎಂದರೆ ಕೆಲವು ರೈತರು ತಮ್ಮ ಸಾಲ ವಜಾ ಆಗುತ್ತದೆಂದು ಹೇಳುತ್ತಿದ್ದಾರೆ. ಮತ್ತೆ ಕೆಲವರು ಮನ್ನಾ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಹೀಗಾಗಿ ಸಹಕಾರಿ ಸಂಘಗಳು ಬಹಳ ಆಸಕ್ತಿಯುತವಾಗಿದೆ. ಹೇಗಿದ್ದರೂ ಈಗ ನಾವು ಗೊಬ್ಬರಗಳ ಬೆಲೆಯ ಬಗ್ಗೆ ಮಾತನಾಡುವುದಿದೆ. ಅದರ ಜೊತೆಗೆ ಈ ಒಂದು ವಿಷಯವನ್ನು ಕೂಡ ಸೇರಿಸಿ ಕೊಂಡು ಯಾವುದಾದರೊಂದು ಅಂತಿಮ ತೀರ್ಮಾನವನ್ನು ಕೊಡಬೇಕು.

(ಗೊಂದಲ)

+ ಶ್ರೀ ಪಿ.ಜಿ. ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾನು ಒಂದು ವಿಷಯವನ್ನು ಹೇಳಬೇಕಾಗಿದೆ. ಒಂದೂವರೆ ವರ್ಷದ ಹಿಂದೆ ಸಾಲವನ್ನು ಮನ್ನಾಮಾಡುವ ವಿಚಾರದ ಬಗ್ಗೆ ವಿ.ಪಿ.ಸಿಂಗ್ ರವರ ಸರ್ಕಾರ ಕೇಂದ್ರದಲ್ಲಿ ಇದ್ದಂತಹ ಸಂದರ್ಭದಲ್ಲಿ ಒಂದು ವರ್ಗದ ಸಾಲವನ್ನು ರದ್ದು ಮಾಡತಕ್ಕದ್ದು ಮತ್ತು ಇದಕ್ಕೆ ರಾಜ್ಯಸರ್ಕಾರ ಸಹಕಾರವನ್ನು ಕೇಳಿ ಒಂದು ನಿರ್ಣಯವನ್ನು ಮಾಡಿದ್ದರು. ಅದು ತಮಗೆ ಮತ್ತು ನಮ್ಮೆಲ್ಲರಿಗೂ ಗೊತ್ತಿರುವ ವಿಚಾರ. ಆದಾದ ಮೇಲೆ ಈ ಸದನದಲ್ಲಿ ನಾವು ಸಾಕಷ್ಟು ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ನಮಗೆಲ್ಲರಿಗೂ ಸಹ ಇದರ ಬಗ್ಗೆ ಕಳಕಳಿ ಇದೆ. ಪ್ರೊ. ನಂಜುಂಡಸ್ವಾಮಿಯವರು ಬಹಳ ಮುಖ್ಯವಾದ ಈ ಒಂದು ವಿಚಾರದಲ್ಲಿ ಬಹಳ ಆಳವಾಗಿ ಅಭ್ಯಾಸವನ್ನು ಮಾಡಿ ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ. ರೈತರ ಪ್ರಶ್ನೆ ಬಂದಾಗ ಸಾಲ ಎನ್ನತಕ್ಕಂತಹ ವಿಚಾರ ಇಲ್ಲವೇ ಇಲ್ಲ, ರೈತನು ಸಾಲಗಾರ ಅಲ್ಲವೇ ಅಲ್ಲ ಎನ್ನತಕ್ಕಂತಹ ಮಾತನ್ನು ಅವರು ಮೊದಲಿನಿಂದಲೂ ಹೇಳಿಕೊಂಡೇ ಬಂದಿದ್ದಾರೆ. ಅದು ನನಗೆ ಪ್ರಾರಂಭದಲ್ಲಿ ಹಿಡಿಸಿರಲಿಲ್ಲ. ಆದರೆ ಕಳೆದ 40 ವರ್ಷಗಳ ನಮ್ಮ ದೇಶದಲ್ಲಿ ನಡೆದುಕೊಂಡು ಬಂದಿರತಕ್ಕ ಆರ್ಥಿಕ ವ್ಯವಸ್ಥೆಯ ಬಗ್ಗೆ ಬಹಳ ದೀರ್ಘವಾಗಿ ಯೋಚನೆಯನ್ನು ಮಾಡಿದಾಗ ಅವರ ಹೇಳಿಕೆಯು ಸರಿ ಎಂದು ಗೊತ್ತಾಗುತ್ತದೆ. ಈ ದೃಷ್ಟಿಯಲ್ಲಿ ಹಿಂದೆ ನಮ್ಮ ಸಹಕಾರ ಮಂತ್ರಿಗಳಾಗಿದ್ದಂತಹ ಮಾನ್ಯ ಜಾಲಪ್ಪನವರ ಒಂದು ಅಭಿಪ್ರಾಯವೂ ಇದೆ. ಇದರಲ್ಲಿ ಸಾಲ ಮನ್ನಾ ಆಗಬಾರದೆಂದು ಯಾರದೂ ಸಹಿತ ಇಲ್ಲ. ಸಾಲ ಮನ್ನವು ನಿಜವಾಗಿಯೂ ಯಾರು ಕಷ್ಟದಲ್ಲಿದ್ದಾರೋ ಅವರದು ಆಗಲೇಬೇಕು. ಆದರೆ ಯಾವ ದೃಷ್ಟಿಯಲ್ಲಿ ಇದು ಆಗಬೇಕು ಎಂಬುದಕ್ಕೆ ನಮ್ಮ ನಮ್ಮ ವ್ಯಾಖ್ಯಾನ ಇದೆ. ಈಗ ನಮ್ಮ ಬಿ.ಜೆ.ಪಿ.ಯವರು ಅದನ್ನು ಪ್ರತಿಭಟಿಸಿ ಧರಣಿಕುಳಿತ್ತಿದ್ದಾರೆ. ಅದಕ್ಕೆ ಸಂತೋಷ ಆದರೆ ಇದೇ ಪಕ್ಷದಿಂದ, ಬೆಂಗಳೂರಿನಿಂದ ಗೆದ್ದು ಹೋಗಿರತಕ್ಕಂತಹ ಪ್ರೊ. ವೆಂಕಟಗಿರಿಗೌಡರು ಹೇಳಿದ್ದಾರೆ. ಅವರು ಆರ್ಥಿಕ ತಜ್ಞರು. ಅವರ ಬಗ್ಗೆ ಲಘುವಾಗಿ ಹೇಳುವುದಲ್ಲ, ಅವರು ನನ್ನ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ. ಅವರು ನನ್ನ ಗುರುಗಳು ಅವವು ಏನು ಹೇಳಿದ್ದಾರೆಂದರೆ ಸಾಲವನ್ನು ಮನ್ನಾ ಮಾಡತಕ್ಕದ್ದು ಅಷ್ಟು ಸೂಕ್ತವಲ್ಲ, ಇದರಿಂದ ಆರ್ಥಿಕ ವ್ಯವಸ್ಥೆಯು ಹದಗೆಡುತ್ತದೆ ಎಂದಿದ್ದಾರೆ. ಮತ್ತು ಈ ರಾಜ್ಯಸರ್ಕಾರಗಳು ಅಂದರೆ ರಾಜಸ್ಥಾನ, ಮಧ್ಯಪ್ರದೇಶ ಸರ್ಕಾರಗಳು ಇದನ್ನು ಮಾಡಿದೆಯೋ ಅಥವಾ ಬಿಟ್ಟಿದೆಯೋ ಅದನ್ನು ಹೇಳಿ. ಮಾನ್ಯ ಈಶ್ವರಪ್ಪನವರು ಚಾಲೆಂಜ್ ನ್ನು ತೆಗೆದುಕೊಳ್ಳುತ್ತೇನೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದನ್ನು ಚರ್ಚೆ ಮಾಡಲು ಇದು ವೇದಿಕೆ ಅಲ್ಲ, ಮಧ್ಯಪ್ರದೇಶ ಸರ್ಕಾರದವರು. ರಾಜಸ್ಥಾನ ಸರ್ಕಾರದವರು ಎಷ್ಟರಮಟ್ಟಿಗೆ ಮಾಡಿದ್ದಾರೆ. ಎನ್ನುವುದು ನಮಗೆ ಗೊತ್ತಿರತಕ್ಕ ವಿಚಾರ. ನಮ್ಮ ಸರ್ಕಾರ ಕೇಂದ್ರ ಸರ್ಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಅವರು ಏನು ಮಾಡಿದರು. ಎಷ್ಟು ಹಣವನ್ನು ಕೊಟ್ಟಿದ್ದಾರೆ ಎನ್ನುವುದು ನಮಗೆ ಗೊತ್ತಿರುವ ವಿಚಾರವೆ ಇವತ್ತು ಏನಾಗುತ್ತದೆಂದರೆ, ರೈತರಿಗೆ ಸಾಲ ಸಿಗುತ್ತಿಲ್ಲ. ಇದು ಒಂದು ಎರಡನೆಯದಾಗಿ, ಲೋಯರ್ ಲೆವಲ್‌ನಲ್ಲಿ ಕೆಲವು ಅಧಿಕಾರಿಗಳು ರೈತರನ್ನು ಹೆರಾಸ್‌ಮೆಂಟ್ ಮಾಡುತ್ತಿದ್ದಾರೆ. ಇದನ್ನು ನಿಲ್ಲಿಸಲು ನೀವು ಕ್ರಮತೆಗೆದುಕೊಳ್ಳುವ ಬಗ್ಗೆ ಭರವಸೆಯನ್ನು ಕೊಡಬೇಕು. ಮೂರನೆಯದಾಗಿ ನಾವು ದೆಹಲಿಗೆ ಹೋದಾಗ ಇವರ ಬಗ್ಗೆ ಚರ್ಚೆ ಮಾಡುತ್ತೇವೆಂದು ಈಗಾಗಲೇ ತಾವು ಹೇಳಿದ್ದೀರಾ. ಈ ಹೆರಾಸ್‌ಮೆಂಟ್‌ನ್ನು ನಿಲ್ಲಿಸತಕ್ಕದ್ದಕ್ಕೆ ತಾವು ಭರವಸೆಯನ್ನು ಕೊಡಬೇಕು.

ಅಧ್ಯಕ್ಷರು : ಆಗಲೆ ಕೊಟ್ಟಿದ್ದಾರಲ್ಲಾ

ಶ್ರೀಎಸ್. ಬಂಗಾರಪ್ಪ : ಆಗಲೇ ಆಶ್ವಾಸನೆ ಕೊಟ್ಟಿದ್ದೇನೆ. ಈಗಲೂ ಕೂಡ ಮತ್ತೊಮ್ಮೆ ತಮ್ಮ ಗಮನಕ್ಕೆ, ಮತ್ತು ಸದನವ ಗಮನಕ್ಕೆ ಮಾನ್ಯ ವಿರೋಧಪಕ್ಷದ ನಾಯಕರ, ವಿರೋಧ ಪಕ್ಷದ ಉಪನಾಯಕರ ಗಮನಕ್ಕೆ ತರುವುದೇನೆಂದರೆ ಏನು ಅವರು ನೋಟೀಸ್‌ಗೆ ಬಂದಿದೆ ಎಂದು ಹೇಳಿದ್ದಾರೋ ಅದನ್ನು ಕಳಿಸಿಕೊಡಲಿ. ಏಕೆಂದರೆ ಕರ್ನಾಟಕ ರಾಜ್ಯದ ಯಾವುದೋ ಮೂಲೆಯಲ್ಲಿ ಈ ರೀತಿ ಆಗಿದ್ದರೆ, ಎಲ್ಲೋಃ ಒಂಮೊಂದು ಸಾರಿ ಒಬ್ಬ ಅಧಿಕಾರಿ ಏನಾದರೂ ಮಾಡಿದ್ದರೆ ನಾವು ತೆಗೆದುಕೊಂಡಿರತಕ್ಕ ನಿಲುವಿನ ಹಿನ್ನೆಲೆಯಲ್ಲಿ ಅದು ಕಿರುಕುಳವಾಗುತ್ತದೆ. ನಾವು ಕೇಂಪ್ರಸರ್ಕಾರಕ್ಕೆ ಕೇಳತಕ್ಕದ್ದು ಒಂದು ವಿಚಾರವಾದರೆ, ಇಲ್ಲಿ ಕಿರುಕುಳ ತಪ್ಪಿಸುವುದು ಮತ್ತೊಂದು ವಿಚಾರ. ಇದರ ಬಗ್ಗೆ ನಾವು ಕ್ರಮತೆಗೆದುಕೊಳ್ಳುತ್ತೇವೆ ಮತ್ತು ರೈತರಿಗೆ ತೊಂದರೆಯಾಗುವುದನ್ನು ನಿಲ್ಲಿಸುತ್ತೇವೆ.

(ಗೊಂದಲ)

\+ ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಸನ್ಮಾನ್ಯ ಅಧ್ಯಕ್ಷರೆ, ಸಾಲ ಮನ್ನಾ ಮಾಡುವ ಬಗ್ಗೆ ಸನ್ಮಾನ್ಯ ಸಿಂಧ್ಯರವರು ಹೇಳಿದ ಹಾಗೆ. ಯಾರದೂ ಭಿನ್ನಾಭಿಪ್ರಾಯವಿಲ್ಲ, ಆದರೆ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಏನು ಹೇಳುತ್ತೇನೆಂದರೆ ಸಾಲ ಮನ್ನಾ ಮಾಡುತ್ತೇವೆಂದು ಅದರ ಹೆಸರಿನಲ್ಲಿ expolitation ನಡೆಯುತ್ತಿದೆ. ಆದುದರಿಂದ ಇದರ ಬಗ್ಗೆ ಆದಷ್ಟು ಬೇಗ ಒಂದು ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಎರಡನೆಯದಾಗಿ,ಈವತ್ತು ನಮ್ಮ ಬಿ.ಜೆ.ಪಿ.ಯ ಸದಸ್ಯರು ಈ ಒಂದು ವಿಚಾರದಲ್ಲಿ ಧರಣಿ ಮಾಡುತ್ತಿದ್ದಾರೆ. ಅದನ್ನು ಮಾಡಲಿ. ಆದರೆ ಚುನಾವಣೆಯ ಸಂದರ್ಭದಲ್ಲಿ ಸಾಲವನ್ನು ಮನ್ನಾ ಮಾಡುತ್ತೇವೆಂದು ಅವರು ಪೋಸ್ಟರ್ ಹಾಕಿದ್ದರು. ಆದರೆ ಮ್ಯಾನಿಪೆಸ್ಟ್‌ನಲ್ಲಿ ಅದು ಇಲ್ಲ ಪಾರ್ಟಿಯ maniffesto ನಲ್ಲಿ ಅದು ಇರಲಿಲ್ಲ, ನನ್ನ ಕ್ಷೇತ್ರದಲ್ಲಿ, ನನ್ನ ಜಿಲ್ಲೆಯಲ್ಲಿ ಅವರು ಸಾಲವನ್ನು ಮನ್ನಾ ಮಾಡುತ್ತೇವೆಂದು ಪೋಸ್ಟರ್ ಹಾಕಿದ್ದರು. ನಾನು ಸ್ವತಃ ಪ್ರೆಸ್ ಕಾನ್ಫರೆನ್ಸ್ ಮಾಡಿ ತೋರಿಸಿದ್ದೇನೆ. ಹೀಗಾಗಿ ರೈತರ ವಿಚಾರದಲ್ಲಿ ಇಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ, ನಾವೆಲ್ಲರೂ ಒಂದೇ ಆಗಿದ್ದೇವೆ. ಆದುದರಿಂದ ಮುಖ್ಯಮಂತ್ರಿಗಳು ಆದಷ್ಟು ಬೇಗ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು. ಇವತ್ತು ತಾವು ಒಂದು ಹೊಸ ಕಾರ್ಯಕ್ರಮವನ್ನು ಹೇಳಿದಿರಿ. ಅದೇನೆಂದರೆ ರೈತರಿಗೆ ರೆವಿನ್ಯೂ ಲ್ಯಾಂಡ್ ರೆಗ್ಯುಲರೈಸ್ ಮಾಡುತ್ತೇವೆಂದು ಹೇಳಿದಿರಿ. ಬಹಳ ಸಂತೋಷ ಆದರೆ ಇವತ್ತು ಏನಾಗುತ್ತದೆ. ಇದರಲ್ಲಿ ಎಕ್ಸ್‌ಪ್ಲಾಯ್‌ಟೇಷನ್ ಬಹಳ ಆಗುತ್ತದೆ. ರೀತಿ ಯಾವ ಫಾರೆಸ್ಟ್ ಲ್ಯಾಂಡ್ಸ್ ಎನ್‌ಕ್ರೋಚ್ ಮಾಡುತ್ತಿದ್ದಾರೆ. ಅರ್ಜಿಗಳನ್ನು ತುಂಬಿಸುತಿದ್ದಾರೆ. ಎಂಬುದನ್ನು ಸರ್ಕಾರ ಪರಿಶೀಲಿಸಬೇಕಾಗುತ್ತದೆ. ಏಕೆಂದರೆ ನಾಳೆ ಚುನಾವಣೆಯಲ್ಲಿ ಲಾಭ ಸಿಗಬೇಕು ಎಂದು ಇದನ್ನು ಮಾಡುತ್ತಿದ್ದಾರೆ. ನಾನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ತಾವು ಒಂದು ಒಳ್ಳೆಯ ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೀರಿ. ರೆವಿನ್ಯೂ ಲ್ಯಾಂಡ್ಸ್‌ನ್ನು ಏನು ಎನ್‌ಕ್ರೋಚ್ ಮಾಡುತ್ತಿದ್ದಾರೆ. ಅದನ್ನು ರೆಗ್ಯುಲರೈಸ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದು ಬಹಳ ಒಳ್ಳೆಯ ಕಾರ್ಯಕ್ರಮ, ನನಗೆ ಸಂತೋಷ. ಇವತ್ತು ಏನಾಗಿಯೆಂದರೆ ಅದನ್ನು ದುರುಪಯೋಗ ತೆಗೆದುಕೊಳ್ಳುತ್ತಿದ್ದಾರೆ. ಫಾರೆಸ್ಟ್ ಲ್ಯಾಂಡ್ಸ್ ಅನ್ನು ಎನ್‌ಕ್ರೋಚ್ ಮಾಡಿದರಲ್ಲಾ ಅವರಿಗೂ ಅರ್ಜಿ ಹಾಕಿ ಎಂದುಹೇಳುತ್ತಿದ್ದಾರೆ. ಇದರಿಂದ ಹಣ ಸುರಿಮಳೆಯಾಗುತ್ತಿದೆ. ಹಾಗಾಗಿ ಈ ಕಾರ್ಯಕ್ರಮದ ಬಗ್ಗೆ ತಾವು ಸ್ಪಷ್ಟವಾದ ನೀತಿಯನ್ನು ಹೇಳಬೇಕು. ಅದೇ ಪ್ರಕಾರವಾಗಿ

ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಈ ಒಂದು ಸಾಲ ಮನ್ನಾಕ್ಕೆ ಪೂರ್ಣ ವಿರಾಮ ಆದಷ್ಟು ಬೇಗನೆ ಕೊಡಿ. ಇಲ್ಲದಿದ್ದರೆ ಅದು ಇದೇ ಪ್ರಕಾರ ನಡೆಯುತ್ತದೆ.

Mr. Speaker : Sri Chandre Gowda - you have to resume your speech.....

ಶ್ರೀ ಎಲ್. ಆರ್. ಶಿವರಾಮೇಗೌಡ : ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಈ ಮಂಡ್ಯಜಿಲ್ಲೆಯಲ್ಲಿ ಅಕ್ರಮವಾಗಿ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆ.

ಅಧ್ಯಕ್ಷರು : ಪ್ರತಿನಿತ್ಯ ಸಸ್ಪೆಂಡ್ ಬೇಕಾದಷ್ಟು ಆಗುತ್ತಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ಈ ಸಂಬಂಧದಲ್ಲಿ ಎರಡು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಅಕ್ರಮವಾಗಿ ಬಿಡುಗಡೆ ಮಾಡಿದ್ದಾರೆ. ಅದನ್ನು ಸಂಪೂರ್ಣವಾಗಿ ಸಿ.ಓ.ಡಿ. ತನಿಖೆಗೆ ಒಪ್ಪಿಸಬೇಕೆಂದು ನಾವು ಈಗಾಗಲೇ ಮುಖ್ಯಮಂತ್ರಿಗಳನ್ನು ಮತ್ತು ಕಂದಾಯ ಮಂತ್ರಿಗಳನ್ನು ಕೇಳಿಕೊಂಡಿದ್ದೇವೆ ಈ ಬಗ್ಗೆ ಇಡೀ ತಾಲ್ಲೂಕು ತಾಲ್ಲೂಕಿನಲ್ಲಿಯೂ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ನಿಮಗೆ ನಾನು ಪರ್ಮಿಷನ್ ಕೊಟ್ಟಿಲ್ಲವಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ನನಗೆ ಪರ್ಮಿಷನ್ ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಪತ್ರವನ್ನು ಕಳುಹಿಸಿಕೊಟ್ಟಿದ್ದೀರಿ. ಅದನ್ನು ನಾನು ಪರಿಶೀಲನೆ ಮಾಡಿ ನಿಮಗೆ ತಿಳಿಸುತ್ತೇನೆ.ನಿನ್ನೆ ಮಾನ್ಯ ಗೃಹಸಚಿವರು ಏನು ಹೇಳಿಕೆ ಮಾಡಿದರು ಅದರ ಬಗ್ಗೆ ನೀವು ಕೆಲವು ಸ್ಪಷ್ಟೀಕರಣಗಳನ್ನು ಕೇಳಬೇಕು ಎಂದು ಕಳಿಸಿಕೊಟ್ಟಿದ್ದೀರಿ ಇವತ್ತು ಬೆಳಿಗ್ಗೆ ಬಂದು ನನ್ನನ್ನು ಭೇಟಿ ಮಾಡಿದ್ದೀರಿ. ಏಕಾಂತಯ್ಯನವರ ವಿಚಾರದಲ್ಲಿ ಕಳುಹಿಸಿಕೊಟ್ಟಿದ್ದೇನೆ. ಅದನ್ನು ಪರಿಶೀಲಿಸಿ ಅನಂತರ ತಮಗೆ ತಿಳಿಸುತ್ತೇನೆ. ರೂಲ್ಸ್ ಪ್ರಕಾರ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿದರೆ ಅದರ ಮೇಲೆ ಚರ್ಚೆಗೆ ಅವಕಾಶವಿಲ್ಲ. ಅದಕ್ಕಾಗಿ ನಾನು ಪರಿಶೀಲಿಸಿ ನಿಮಗೆ ತಿಳಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೆ,ತಾವು ಅಪ್ಪಣೆ ಕೊಟ್ಟರೆ ನಾನು ಮಾತನಾಡುತ್ತೇನೆ. ಈ ಸದನ ಕ್ರಮವಾಗಿಲ್ಲ.

ಅಧ್ಯಕ್ಷರು : ಕ್ರಮವಾಗಿದೆ.

ಡಿ.ಬಿ. ಚಂದ್ರೇಗೌಡ : ಕ್ರಮವಾಗಿದೆಯೆಂದು ತಾವು ಹೇಳಿದರೆ ಅದನ್ನು ನಾನು ಪ್ರಶ್ನೆಮಾಡುವುದಕ್ಕೆ ಹೋಗುವುದಿಲ್ಲ, ನಾರ್ಮಲಿ ಅವರು ಧರಣಿ ಕುಳಿತಾಗ ತಾವು ಅಪ್ಪಣೆ ಕೊಡಿಸಿದ್ದೀರಿ ಎನ್ನುವ ಕಾರಣಕ್ಕಾಗಿ......

ಅಧ್ಯಕ್ಷರು : ಸದನದಲ್ಲಿ 224 ಸದಸ್ಯರು, ನನ್ನನ್ನು ಬಿಟ್ಟು 223 ಜನ ಸದಸ್ಯರು ಇದ್ದಾರೆ ಆ 223 ಸದಸ್ಯರ ಪೈಕಿ 219 ಅದರಲ್ಲಿ ವೆಕೆನ್ಸಿ ಉಂಟು ತಾವು ಶುರುಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ತಮಗೆ ಪತ್ರವನ್ನು ಬರೆದಿದ್ದೆ.ಕರ್ನಾಟಕದಲ್ಲಿ ನಾಯಕತ್ವದಲ್ಲಿ ಬದಲಾವಣೆ ಎಂದು ಹೇಳಿ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಶಿರೋನಾಮೆಯಲ್ಲಿ ಹಾಕಿಲ್ಲ. ನಾನು ಇದಕ್ಕೆ ಸಂಬಂಧಪಟ್ಟಹಾಗೆ ಹೇಳುತ್ತೇನೆ.

ಅಧ್ಯಕ್ಷರು : ಊಹಾಪೋಹಗಳ ಮೇಲೆ ನಾವು......

ಶ್ರೀ ಡಿ.ಬಿ. ಚಂದ್ರೇಗೌಡ : ಪ್ರಧಾನಮಂತ್ರಿಗಳು ಹೇಳಿದ್ದಾರೆ.

ಅಧ್ಯಕ್ಷರು : ಪ್ರಧಾನ ಮಂತ್ರಿಗಳಾದರೂ ಹೇಳಲಿ, ಮತ್ತೊಬ್ಬರಾದರೂ ಹೇಳಲಿ, ಅದು ಊಹೆನೇ

ಶ್ರೀ ಡಿ.ಬಿ. ಚಂದ್ರೇಗೌಡ : ಪಾಸಿಟೀವ್‌ಲಿ. ಪ್ರಧಾನ ಮಂತ್ರಿಗಳು ಹೇಳಿದ್ದಾರೆ. "ಕರ್ನಾಟಕದಲ್ಲಿ ನಾಯಕತ್ವ ಬದಲು ಪಿ.ವಿ.ಎನ್.ಅವರ ಇಂಗಿತ. ಭಿನ್ನಮತೀಯ ಚಟುವಟಿಕೆಗೆ ಬಿರುಸಾಗಿರುವ ಕಾಂಗ್ರೆ ಆಡಳಿತದ ಎರಡು ರಾಜ್ಯಗಳಾದ ಕರ್ನಾಟಕ ಮತ್ತು ಆಂಧ್ರಪ್ರದೇಶದ ನಾಯಕತ್ವ ಬದಲಾವಣೆಯಾಗಲಿದೆ ಎಂಬ ಸೂಚನೆಯನ್ನು ನೀಡಿದ್ದಾರೆ.

Mr Speaker : Intra party matters..... ನಿಮ್ಮ ಪಾರ್ಟಿಯಲ್ಲಿ ಏನಾಗುತ್ತಿದೆ. ಎನ್ನತಕ್ಕಂಥಾದ್ದನ್ನು ಚರ್ಚೆ ಮಾಡುವುದಕ್ಕೆ ಅವರಿಗೆ ಅವಕಾಶ ಕೊಡುವುದಿಲ್ಲ. ಅವರ ಪಾರ್ಟಿಯಲ್ಲಿ ಏನಾಗುತ್ತಿದೆ ಎನ್ನತಕ್ಕಂಥಾದ್ದನ್ನು ಚರ್ಚೆ ಮಾಡುವುದಕ್ಕೆ ನಿಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಯಾರಲ್ಲಿ ಚರ್ಚೆ ಮಾಡಬೇಕು. ನಾಯಕರೇ ಇಲ್ಲವೆಂದಾಗ ನಾವು ಚರ್ಚೆ ಏಕೆ ಮಾಡಬೇಕು.

ಅಧ್ಯಕ್ಷರು : ನಾವು ಈ ಬೇಡಿಕೆಯ ಮೇಲೆ ಚರ್ಚೆ ಮಾಡುತ್ತಿರುವುದು ಈ ಕ್ಷಣದಲ್ಲಿ ಈ ಕ್ಷಣದಲ್ಲಿ ಸಭಾನಾಯಕರು ಇದ್ದಾರೆ. ಸರ್ಕಾರವಿದೆ, ಚರ್ಚೆ ಪ್ರಾರಂಭ ಮಾಡಿ.

ಶ್ರೀ ಡಿ.ಬಿ.ಚಂದ್ರೇಗೌಡ : ತಾವು ನಾಯಕರು ಇದ್ದಾರೆಂದು ಹೇಳಿದ್ದೀರಿ. ನಾನು ಆ ವಿಶ್ವಾಸ ಇಟ್ಟುಕೊಂಡು ಚರ್ಚೆಯನ್ನು ಮುಂದುವರಿಸುತ್ತೇನೆ.

ಅಧ್ಯಕ್ಷರು : ಸಂಪೂರ್ಣವಾಗಿ ನೀವು ಆ ವಿಶ್ವಾಸ ಇಟ್ಟುಕೊಂಡು ಮುಂದುವರಿಯಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಪಕ್ಷದ ವಿಚಾರವನ್ನು ನಮ್ಮ ಸರ್ಕಾರ ಇದ್ದಾಗ ಅವರು ಈ ಕಡೆ ಇದ್ದಾಗ ಪ್ರಸ್ತಾಪಮಾಡಿದ್ದೇವೆ. ಅದಕ್ಕೆ ಆಗಿನ ಸಭಾಧ್ಯಕ್ಷರು ಸ್ವಲ್ಪ ಸ್ವಲ್ಪ ಅವಕಾಶ ಮಾಡಿಕೊಟ್ಟಿದ್ದಾರೆ.

ಅಧ್ಯಕ್ಷರು : ನಾನೂ ಸ್ವಲ್ಪ ಅವಕಾಶ ಮಾಡಿಕೊಟ್ಟಿನೆಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇನ್ನೂ ಸ್ವಲ್ಪ ಅವಕಾಶ ಕೊಟ್ಟರೆ ನಮಗೆ ಸಾಕಾಗುತ್ತದೆ. ಮಾನ್ಯ ಪ್ರಧಾನ ಮಂತ್ರಿಗಳು ನಿನ್ನೆ ಹೇಳಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದರಿಂದ ಏನಾಗುತ್ತದೆ. ಕಾಂಗ್ರೆಸ್ ಪಕ್ಷದ ಒಳಜಗಳವನ್ನು ಬಗೆಹರಿಸಿಕೊಳ್ಳುವುದಕ್ಕೆ. ಚರ್ಚೆ ಮಾಡಲಿಕ್ಕೆ ಇದು ವೇದಿಕೆ ಅಲ್ಲ ಎನ್ನತಕ್ಕದ್ದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಆದರೆ ಇದರಿಂದ ಸರ್ಕಾರದ ಮೇಲೆ ಏನು ಪರಿಣಾಮವಾಗುತ್ತದೆಂಬುದನ್ನು ನಾವು ಯೋಚನೆ ಮಾಡುತ್ತಿದ್ದೇವೆ. ಈಗ ಅಧಿಕಾರಿಗಳು ಇದರ ದುರುಪಯೋಗವನ್ನು ಪಡೆದೆ ಪಡೆಯುತ್ತಾರೆ. ನೋಡೋಣ ನಾಯಕತ್ವದ ಬದಲಾವಣೆ ಆಗುತ್ತದಂತೆ ಮಂತ್ರಿಗಳು ಬದಲಾವಣೆಯಾಗುತ್ತಾರಂತೆ ಈಗಲೇ ನಾವು ಏತಕ್ಕೆ ವಿಲೇವಾರಿ ಮಾಡಬೇಕು. ನಾಳೆ ಅವರ ಸರ್ಕಾರ ಬರಬಹುದು. ಅದೂವರೆಗೂ ನೋಡೋಣ ಎಂದು ಅಧಿಕಾರಿಗಳು ತಿಳಿದುಕೊಳ್ಳುತ್ತಾರೆ. ಇದರಿಂದಾಗಿ ಸರ್ಕಾರದ ಕೆಲಸ ನಿಂತುಹೋಗುತ್ತದೆಂಬ ಭಯದಿಂದ ಇವತ್ತು ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ತಮ್ಮ ಮನವೊಲಿಸಲು ಪ್ರಯತ್ನ ಮಾಡುತ್ತಿದ್ದೇವೆ.

ಅಧ್ಯಕ್ಷರು : ತಾವು ಮಾಡಬಹುದಾದ ಚರ್ಚೆಯಿಂದ ಎಲ್ಲಾ ಸರಿಹೋಗುತ್ತವೆಂದು ನಿಮ್ಮ ಅಭಿಪ್ರಾಯವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೌದು ಸ್ವಾಮಿ ಕೆಲಸ ಆಗುತ್ತದೆ. ಆ ರೀತಿ ಪರಿಸ್ಥಿತಿ ಇಲ್ಲ, ಏನೂ ತೊಂದರೆ ಇಲ್ಲ ಎಂದು ಹೇಳಬೇಕಾಗುತ್ತದೆ. ಅದಕ್ಕಿಂತ ಹೆಚ್ಚಾಗಿ.....

ಅಧ್ಯಕ್ಷರು : ಸರ್ಕಾರ ಭದ್ರವಾಗಿದೆ ಎಂದು ನಾನೇ ಹೇಳುತ್ತಿದ್ದೇನೆ.

ಶ್ರೀಪಿ.ಜಿ.ಆರ್.ಸಿಂಧ್ಯ : ತಾವು ಏನು ಹೇಳಿದರೂ ನಾವು ಕೇಳುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡು : ಇದರ ಬಗ್ಗೆ ಕೇವಲ ಇವತ್ತು ಅಲ್ಲ......

ಅಧ್ಯಕ್ಷರು : ಆರ್ಡರ್,ಆರ್ಡರ್, ಮಾತಾನಾಡವವರು ದಯವಿಟ್ಟು ಕುಳಿತುಕೊಂಡು ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಇದಕ್ಕಿಂತ ಹೆಚ್ಚಾಗಿ ದೆಹಲಿಯಲ್ಲಿ ಇದರ ಚಟುವಟಿಕೆಗಳಾಗುತ್ತಿವೆ.ಇನ್ನು ಯಾರೋ ಒಬ್ಬರು ಆಡಳಿತ ಪಕ್ಷದ ಶಾಸಕರು ಸದ್ಯದಲ್ಲೇಬಂಡಾಯ ಕಾಂಗ್ರೆಸ್ ಶಾಸಕರ ಸಭೆಯನ್ನು ಇನ್ನು ಎರಡು ದಿವಸದಲ್ಲೇ ಮುಗಿಸುತ್ತೇವೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಊಹಾ ಪೋಹಗಳ ಮೇಲೆ ಬೇಡ.

ಶ್ರೀ ಪಿ.ಜಿ. ಆರ್. ಸಿಂಧ್ಯ : ಊಹಾಪೋಹಗಳ ಪ್ರಶ್ನೆ ಅಲ್ಲ, ಇದು ಜವಾಬ್ದಾರಿ.....

Mr. Speake· : no.no. I will not allow.

(ಗೊಂದಲ)

ಅಧ್ಯಕ್ಷರು : ಸಭಾನಾಯಕರು ಹೇಳುವುದು ಏನೂ ಇಲ್ಲ ಇಲ್ಲಿ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಸಭಾನಾಯಕರು ಹೇಳುವುದಿದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : 27ನೇ ತಾರೀಖಿನೊಳಗೆ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡಬೇಕೆಂದು ನಾವು ಹೇಳಿದ್ದೇವೆ. 30 ನೇ ತಾರೀಖು ಇದನ್ನು ನಾವು ಮಾಡಿಕೊಡುತ್ತೇವೆಂದು ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆಯಲ್ಲಿ ಒಪ್ಪಿದ್ದೇವೆ. ಆವರೆ ಅದುವರಿಗೂ ಇವರು ಇರುತ್ತಾರೆಯೇ ಎಂಬ ಅನುಮಾನ ಬಂದಿದೆ. 30ನೇ ತಾರಿಖು ಅಪ್ರೋಪ್ರಿಯೇಷನ್ ಬಿಲ್ ಪಾಸ್ ಆಗದಿದ್ದರೆ ಅದರ ಪರಿಣಾಮ ಏನಾಗುತ್ತದೆಂಬುದು ತಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ.

ಅಧ್ಯಕ್ಷರು : ಒಂದು ಪ್ರಯತ್ನ ನಿಮ್ಮ ಕಡೆಯಿಂದ ನಡೆಯಿತು. ಈ ಸರ್ಕಾರವನ್ನು ತೆಗೆಯಲಿಕ್ಕೆ...

(ಗೊಂದಲ)

ಅಧ್ಯಕ್ಷರು : ಬಸವರಾಜ್ ಅಟ್ಟೂರ್ ರವರೇ ನಾನು ಪ್ರಶ್ನೆಯನ್ನು ಕೇಳಿದ್ದು ಮಾನ್ಯ ಸಿಂಧ್ಯರವರಿಗೆ ದಯವಿಟ್ಟು ಕೂಡಿ. ಸಿಂಧ್ಯರವರೇ, ಒಂದುಪ್ರಯತ್ನ ನಡೆಯಿತು. ಆ ಪ್ರಯತ್ನದಲ್ಲಿ ವಿಫಲರಾದಿರಿ. ಇನ್ನು 6 ತಿಂಗಳ ಕಾಲದವರೆಗೆ ನೀವು ಮತ್ತೆ

ಅವಿಶ್ವಾಸ ನಿರ್ಣಯವನ್ನು ತರುವುದಕ್ಕೆ ಬರುವುದಿಲ್ಲ ಆದುದರಿಂದ ಈಗ ಬೇಡಿಕೆಗಳ ಮೇಲೆ ಚರ್ಚೆಯನ್ನು ಮುಂದುವರಿಸಿ.

(ಗೊಂದಲ)

ಅಧ್ಯಕ್ಷರು : ನಿಮಗೆ ನನ್ನ ಪರವಾಗಿ ಈಗ ಒಂದು ಆಶ್ವಾಸನೆಯನ್ನು ಕೊಡುತ್ತೇನೆ. 27ನೇ ತಾರೀಖಿನವರಿಗೆ ನಿಮಗೆ ಯಾವುದೇ ಗಡಿಬಿಡಿ ಬೇಡ. ಈಗ ಬೇಡಿಕೆಯ ಮೇಲೆ ಚರ್ಚೆಯನ್ನು ಮುಂದುವರಿಸಿ.

(ಗೊಂದಲ)

ಶ್ರೀ ಎಸ್.ಎಚ್. ಕೌಜಲಗಿ : 27ನೇ ತಾರೀಖಿನವರೆಗೆ...

ಅಧ್ಯಕ್ಷರು : ಈ ಸದನ 27ನೇ ತಾರೀಖಿನವರೆಗೂ ನಡೆಯುತ್ತಿದೆಂದು ಸದನದ ಕಾರ್ಯಕಲಾಪಗಳ ಸಮಿತಿಯು ಮಾಡಿರತಕ್ಕ ತೀರ್ಮಾನ ಆದುದರಿಂದ ಆ ಬಗ್ಗೆ ನಿಮಗೆ ಯಾವುದೇ ಅನುಮಾನವೂ ಬೇಡ. ಚಂದ್ರೇಗೌಡರೇ, ನಿಮ್ಮ ಚರ್ಚೆಯನ್ನು ಮುಂದುವರಿಸಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಸದನದಲ್ಲಿ ನಾಯಕರು ಇದ್ದಾರೆ.....

(Interruptions)

ಶ್ರೀ ವಾಟಾಳ್ ನಾಗರಾಜ್ : ಸದನ ಸರಿಯಾಗಿದೆ ಎಂದು ಅಧ್ಯಕ್ಷರೇ ಹೇಳಿದರು. ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ, 2 ಕೋಟಿ ರೂಪಾಯಿಗಳ ಜನರೇಟರ್ ಸುಟ್ಟು ಹೋಗಿದೆ. ಎಂದು ಒಂದು ಪತ್ರಿಕೆಯಲ್ಲಿ ಬಂದಿದೆ. ಅದರ ಬಗ್ಗೆ ಸದನಕ್ಕೆ....

ಅಧ್ಯಕ್ಷರು : ಇವತ್ತು ಸದನದಲ್ಲಿ ವಿದ್ಯುಚ್ಛಕ್ತಿ ಮಂಡಲಿಯ ಬಗ್ಗೆ ಬೇಡಿಕೆ ಇದೆ. ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಚರ್ಚೆಯನ್ನು ಮುಂದುವರಿಸಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಈ ಚರ್ಚೆಯನ್ನು ಮುಂದುವರಿಸುವುದಕ್ಕೆ ನನಗೆ ಬಹಳ ಮುಖ್ಯವಾದ ಕಾರಣದಿಂದ ಮನಸ್ಸಿಲ್ಲ. ಆದರೂ ತಾವು ಅಪ್ಪಣೆಯನ್ನು ಕೊಟ್ಟಿರುವುದರಿಂದ ಮುಂದುವರಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಎಂ. ಇದಿನಬ್ಬ ಅವರು ಅಧ್ಯಕ್ಷ ಪೀಠಕ್ಕೆ ಬಂದುರು)

(ಬಾವಿಯಲ್ಲಿ ಕೆಲವು ಮಾನ್ಯ ಸದಸ್ಯರು ಕುಳಿತು ಮಾತನಾಡುತ್ತಿದ್ದರಿಂದ ರೆಕಾರ್ಡ್ ಮಾಡಲಿಲ್ಲ.)

(ಗೊಂದಲ)

ಶ್ರೀ ಎಸ್. ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ , ಮಾನ್ಯ ವಾಟಾಳ್ ನಾಗರಾಜ್ ರವರು ಬಾವಿಯಲ್ಲಿ ಕುಳಿತಿದ್ದಾರೆ. ದಯವಿಟ್ಟು ಅವರ ಮನವೊಲಿಸಿ ಈ ಕಡೆಗೆ ಕರೆದುಕೊಳ್ಳಬೇಕು.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಧರಣಿ ಮಾಡುತ್ತಿರುವಾಗ ಸದನವನ್ನು ನಡೆಸುವುದು ಸೂಕ್ತವಲ್ಲ, ಅವರಿಗೆ ತಾವು ದಯವಿಟ್ಟು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಗೌಡರೇ, ಇವತ್ತು ನಿಮಗೆ ಸಮಾಧಾನವಾಗುತ್ತದೆಯೇ? ಸಾಲ ಮನ್ನಾ ಆಗದಿದ್ದರೆ ರೈತ ಉದ್ಧಾರವಾಗುತ್ತಾನೆಯೇ?

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ : ಯಡಿಯೂರಪ್ಪನವರೇ ನಿಮ್ಮ ವೆಂಕಟಗಿರಿ ಗೌಡರಿಗೆ ಹೇಳಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ :ಈ ಸಂದರ್ಭದಲ್ಲಿ ಅವರ ಮನಸ್ಸನ್ನು ಒಲಿಸುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಬಿ.ಎಸ್, ಯಡಿಯೂರಪ್ಪ : ಇವತ್ತು ಮಾನ್ಯ ವೆಂಕಟಗಿರಿ ಗೌಡರು ಕ್ಲಾರಿಫೈ ಮಾಡಿದ್ದಾರೆ. 10 ಸಾವಿರ ರೂಪಾಯಿ ನೊಳಗಿರತಕ್ಕ ಬಡ ರೈತರ ಸಾಲ ಮನ್ನಾ ಆಗಬೇಕೆಂದು ಮೂರನೇ ದಿವಸ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಇಲ್ಲಿ ಉದ್ದೇಶ ಪೂರ್ವಕವಾಗಿ ಹೆಸರನ್ನು ತರುವುದಕ್ಕೆ ಪ್ರಯತ್ನ ಮಾಡಿದರು. ಇದು ಮೊದಲನೆಯದು.

ಇನ್ನು ಎರಡನೆಯದಾಗಿ ನಾವುಕೊಟ್ಟಂಥ ಆಶ್ವಾಸನೆಗೆ ನೀವು ಏನು ಹೇಳುತ್ತೀರಿ? ಇದರ ಬಗ್ಗೆ ಮಾತಾಡುವುದಕ್ಕೆ ನನಗೆ ಅಧಿಕಾರ ಇದೆ. ಇವತ್ತು ರೈತರು ಸಾಯುತ್ತಿದ್ದಾರೆ ಅವರಿಗೆ ಆಶ್ವಾಸನೆ ಕೊಟ್ಟಿದೆ. ಅವರು ಸಾಯುತ್ತಿದ್ದಾರೆ. ಸಾಲ ಮನ್ನಾ ಮಾಡಿದರೆ ಸಮಸ್ಯೆ ಬಗೆಹರಿಯುವುದಿಲ್ಲ.

(ಗೊಂದಲ)

ಛೇರ್ಮನ್ : ಈಗ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ಹೇಳಿದ್ದೇನೆ. ಬೇರೆಯವರು ಮಾತಾಡಿದ್ದು ಯಾವುದೂ ರೆಕಾರ್ಡ್‌ಗೆ ಹೋಗಬಾರದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ ಇವತ್ತು ಲಕ್ಷಾಂತರ ರೈತ ಸಮೂಹಕ್ಕೆ ನಾವು ಆಶ್ವಾಸನೆ ಕೊಟ್ಟಿದ್ದು....

(ಗೊಂದಲ)

ಶ್ರೀ ಬಿ.ಎಸ್, ಯಡಿಯೂರಪ್ಪ : ಇವತ್ತು ಮಳೆ ಬಿದ್ದಿದೆ.ನೀರಿನ ಅನಕೂಲವಾಗಿದೆ. ಕೆಲಸ ಮಾಡುವುದಕ್ಕೆ ರೈತ ಸಿದ್ಧವಾಗಿದ್ದಾನೆ. ಕೇವಲ ಆಶ್ವಾಸನೆ ಕೊಟ್ಟು...

(ಗೊಂದಲ)

ಛೇರ್ಮನ್ : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ರೈತರಿಗೆ ಸಾಲ ಮನ್ನಾ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರನ್ನು ನಾನು ಕೇಳುತ್ತೇನೆ. ನಾನು ಇಲ್ಲಿ ಬಂದು ಕುಳಿತು ಮಾತುನಾಡುವುದಕ್ಕೆ ಅಧಿಕಾರ ಇದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರು ನನಗೆ ಅಪ್ಪಣೆಯನ್ನುಕೊಟ್ಟಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಈಲ್ಡ್ ಆಗಿದ್ದಾರೆ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಆಶ್ವಾಸನೆಯನ್ನು ಕೊಟ್ಟುಬಂದು ಇವತ್ತು ರೈತನಿಗೆ ದ್ರೋಹ ಮಾಡುವಂಥ ಈ ಸರ್ಕಾರವನ್ನು ಸರ್ಕಾರದ ನೀತಿಯನ್ನು...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಸರ್ಕಾರ ಸುಳ್ಳು ಆಶ್ವಾಸನೆ ಕೊಡಬಹುದೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸಭೆಯನ್ನು ಅರ್ಧಗಂಟೆ ಕಾಲ ಮುಂದಕ್ಕೆ ಹಾಕಿ. ಇದು ಅತ್ಯಂತ ಪ್ರಮುಖವಾದ ವಿಚಾರವೆಂದು ಚರ್ಚೆಮಾಡುತ್ತಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಮನವಿಮಾಡಿಕೊಳ್ಳುತ್ತಿದ್ದೇವೆ. ಈ ಬಗ್ಗೆ ಸರ್ಕಾರದ ಜೊತೆಯಲ್ಲಿ ಅಧ್ಯಕ್ಷರ ಜೊತೆಯಲ್ಲಿ ಕುಳಿತು ಮಾತನಾಡಿ. ಇದು ಬಹಳ ಪ್ರಮುಖವಾದ ವಿಚಾರ.

(ಗೊಂದಲ)

ಛೇರ್ಮನ್ : ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಗಂಭೀರವಾದ ವಿಚಾರ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತಿದ್ದೇನೆ. ನೀವು ನಿಮ್ಮ ಭಾಷಣವನ್ನು ಪ್ರಾರಂಭ ಮಾಡಬಾರದು. ನೀವು ಒಳಗಡೆ ಕುಳಿತು ಮಾತುಕತೆ ಪ್ರಾರಂಭ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರು ಅಪ್ಪಣೆ ಕೊಟ್ಟಿದ್ದಾರೆ. ರೈತರ ಬಗ್ಗೆ ಮಾತನಾಡುವಂಥ ಅಧಿಕಾರ ನಿಮಗೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ರೈತರ ಪರವಾಗಿ ಅಥವಾ ವಿರುದ್ಧವಾಗಿ ಮಾತನಾಡುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯದ ರೈತರಿಗೆ ಆಶ್ವಾಸನೆ ಕೊಟ್ಟು 10 ಸಾವಿರ ರೂಪಾಯಿನೊಳಗಿರುವ ರೈತರಿಗೆ ಸಾಲ ಮನ್ನಾ ಆಗಿದೆ. ನೀವು ಕೊಡಬಾರದು ಎಂದು ಹೇಳಿದ್ದಾರೆ. ಈಗ ರೈತರಿಗೆ ನೋಟೀಸ್ ಗಳು ಹೋಗುತ್ತಿವೆ. ರೈತರಿಗೆ ಹೊಸದಾಗಿ ಬೆಳೆ ಸಾಲ ಸಿಕ್ಕುತ್ತಿಲ್ಲ. ರೈತರು ಇವತ್ತು ತಬ್ಬಲಿಗಳಾಗುತ್ತಿದ್ದಾರೆ. ನೀವು ರೈತರಿಗೆ ದ್ರೋಹ ಮಾಡುತ್ತಿದ್ದೀರಿ. ಆಶ್ವಾಸನೆ ಕೊಟ್ಟಂತೆ ನೀವು ಇವತ್ತು ನಡೆದುಕೊಳ್ಳುತ್ತಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸುಳ್ಳು ಆಶ್ವಾಸನೆಯನ್ನು ಕೊಟ್ಟು ಚುನಾಯಿತರಾಗಿ ಬಂದಿದ್ದೀರಿ. ರೈತರ ಬಗ್ಗೆ ನಿಮಗೆ ಕಳಕಳಿ ಇಲ್ಲ. ಕಳೆದ 2ವರ್ಷಗಳಿಂದ ರೈತರಿಗೆ

ವಂಚನೆಯನ್ನು ಮಾಡುತ್ತಿದ್ದೀರಿ. ಇಂಥ ನಿಮ್ಮ ಸರ್ಕಾರದ ಬಗ್ಗೆ, ಸರ್ಕಾರದ ನೀತಿಯ ಬಗ್ಗೆ ಪ್ರತಿಭಟನೆಯನ್ನು ಮಾಡಲೇ ಬೇಕು. ರಾಜ್ಯದ ರೈತ ಸಮೂಹಕ್ಕೆ ದ್ರೋಹ ಮಾಡುತ್ತಿದ್ದೀರಿ, ನೀವು ಹೊರಗೆ ಬಂದು ಹೇಳಿದರೆ ಗೊತ್ತಾಗುತ್ತದೆ.

11.5 ಪಿ.ಎಂ.

ಇದು ಜನ ವಿರೋಧಿ ಸರ್ಕಾರ, ರೈತರ ಬಗ್ಗೆ ಕಳಕಳಿ ಇಲ್ಲದ ಸರ್ಕಾರ ಕಳೆದ ಎರಡು ವರ್ಷಗಳಿಂದ ಆಶ್ವಾಸನೆಯನ್ನು ಕೊಡುತ್ತಲೇ ಬಂದು ರೈತ ಸಮುದಾಯಕ್ಕೆ ಇವತ್ತು ಕೇವಲ ಸಾಲ ಮನ್ನ ಮಾಡುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ.

(ಗೊಂದಲ)

ಚೇರ್‌ಮೆನ್ : ನಾನು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಮಾತನಾಡಲು ಕರೆದಿದ್ದೇನೆ. ಅವರು ಮಾತನಾಡುವರು. ತಾವು ಎಲ್ಲರೂ ಕುಳಿತು ಕೊಳ್ಳಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈಗ ಸಭೆಯನ್ನು ಅರ್ಧ ಗಂಟೆಕಾಲ ಮುಂದೂಡಬೇಕು. ಎತಕ್ಕೆಂದರೆ ಪರಿಸ್ಥಿತಿ ಸರಿಯಾಗಿಲ್ಲ. ರೈತರ ಬಗ್ಗೆ ರಾಜ್ಯ ಸರ್ಕಾರಕ್ಕೆ ಯಾವ ಕಾಳಜಿಯೂ ಇಲ್ಲ ರೈತರ ಬಗ್ಗೆ ರಾಜ್ಯ ಸರ್ಕಾರ ತೆಗೆದುಕೊಂಡ ನಿಲುವು ಸರಿಯಾಗಿಲ್ಲ. ನಮ್ಮ ವಿರೋಧ ಪಕ್ಷದ ನಾಯಕರು ಈ ಬಗ್ಗೆ ಮಾತುಕತೆ ನಡೆಸಲಿ. ಅವರನ್ನು ತಮ್ಮ ಕೊಠಡಿಗೆ ಕರೆಸಿ ಮಾತುಕತೆ ನಡೆಸಬೇಕೆಂದು ಹೇಳುತ್ತೇನೆ. ಈ ರೀತಿ ರೈತ ವಿರೋಧ ಧೋರಣೆ ಒಳ್ಳೆಯದಲ್ಲವೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಕಳೆದ ಎರಡು ವರ್ಷಗಳಿಂದ ರೈತರಿಗೆ ಅನ್ಯಾಯ ಮಾಡಿಕೊಂಡೇ ಬರುತ್ತಿದೆ.

(ಗೊಂದಲ)

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರನ್ನು ಕರೆದಿದ್ದೀರಿ. ಅವರು ಏನು ಮಾತನಾಡುತ್ತಾರೋ ಅದನ್ನು ಹೇಳಲಿ. ಅವರಿಗೆ ಅವಕಾಶವನ್ನು ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ. ಪರಿಸ್ಥಿತಿ ಸರಿಯಿಲ್ಲ, ದಯವಿಟ್ಟು ಸಭೆಯನ್ನು ಮುಂದಕ್ಕೆ ಹಾಕಿ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ : ಮಾನ್ಯ ಅಧ್ಯಕ್ಷರೇ, ಅವರನ್ನು ಕುಳಿತುಕೊಳ್ಳುವುದಕ್ಕೆ ಹೇಳಿರಿ. ಅವರೊಬ್ಬರೇ ಕಳಕಳಿ ಇರತಕ್ಕಂಥವರು ಮತ್ತೆ ಯಾರು ಇಲ್ಲ ವೆಂದಲ್ಲ. ಅವರನ್ನು ಕೂಡಿಸಿ ಅವರು ಒಳಗೆ ಕೂಡಲಿ, ಇಲ್ಲವೇ ಹೊರಗಡೆ ಹೋಗಲಿ. ಏನು ಅಲ್ಲಿ ಹೋಗುತ್ತಾರೆ. ಇಲ್ಲಿ ಹೋಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮನ್ನು ಹೊರಗೆಹಾಕಿ ನೀವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ.

ಚೇರ್‌ಮೆನ್ : ಮಾನ್ಯ ವಿರೋಧಪಕ್ಷದ ನಾಯಕರನ್ನು ಕರೆದಿದ್ದೇನೆ ಅವರು ಮಾತನಾಡಲಿ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಮ್ಮ ಕಾರ್ಯಾಲಯದಲ್ಲಿ ಕುಳಿತು ಈ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಒಂದು ತಿಳಿವಾತಾವರಣವನ್ನು ನಿರ್ಮಾಣ ಮಾಡುವುದಕ್ಕೋಸ್ಕರವಾಗಿ ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ವಿರೋಧ ಪಕ್ಷದ ನಾಯಕರನ್ನು ಮತ್ತು ಎಲ್ಲ ಪಕ್ಷಗಳ ಮುಖಂಡರುಗಳನ್ನು ಕರೆಸಿ ತಮ್ಮ ಕಾರ್ಯಾಲಯದಲ್ಲಿ ಮಾತುಕತೆ ಆಡಿ ಏನಾದರೂ ಒಂದು ಪರಿಹಾರವನ್ನು ತಾವು ಕಂಡುಹಿಡಿಯಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಐದು ಜನ ಶಾಸಕರಿಂದ ಈ ಸದನದ ಕಾರ್ಯಕಲಾಪಗಳನ್ನು ತಪ್ಪಿಸುವುದಕ್ಕೆ ಆಗುವುದಿಲ್ಲವೆಂದು ನಾನು ಹೇಳಿದ್ದೇನೆ. ಈ ಸದನದ ಕಾರ್ಯಕಲಾಪಗಳು ನಡೆದುಕೊಂಡು ಹೋಗಬೇಕು. ನಮ್ಮ ಐದು ಜನರಿಂದ ಸಭೆಯ ಕಾರ್ಯಕಲಾಪಗಳು ನಿಲ್ಲಬಾರದು. ಈ ಅಭಿಪ್ರಾಯಕ್ಕೆ ತಾವು ಏನು ತೀರ್ಪನ್ನುಕೊಡುತ್ತೀರೋ ಅದಕ್ಕೆ ನಾವು ತಲೆಬಾಗುತ್ತೇವೆ. ನನ್ನ ವಿನಂತಿ ಏನೆಂದರೆ ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಕಳೆದ ಒಂದೂವರೆ ವರ್ಷದಿಂದ ಇಂಥ ಆಶ್ವಾಸನೆಯನ್ನು ಕೊಟ್ಟು ಕೊಂಡೇ ಬಂದಿರುತ್ತಾರೆ. ರೈತರಿಗೆ ಹೊಸ ಬೆಳೆ ಸಾಲ ಸಿಗುತ್ತಿಲ್ಲ. ಅವರು ಬೀದಿ ಪಾಲುಗುತ್ತಾರೆ. ಅದಕ್ಕೋಸ್ಕರವಾಗಿ ಏನಾದರೂ ಪರಿಹಾರವನ್ನು ಹುಡುಕಿ ಎಂದು ಹೇಳುತ್ತಿದ್ದೇನೆ. ರೈತರ ಸಾಲ ಮನ್ನಾ ಮಾಡುವುದಿಲ್ಲವೆಂದರೆ ಅವರು ಬೇರೆ ಏನಾದರೂ ಪರಿಹಾರವನ್ನು ಹುಡುಕಿಕೊಂಡು ಹೋಗುತ್ತಾನೆ. ಅದಕ್ಕೆ ಯಾವ ರೀತಿಯಾದರೂ ಹೋರಾಟ ಮಾಡಲು ಬೀದಿಗೆ ಇಳಿಯುತ್ತಾನೆ. ಅಂಥ ಹೋರಾಟ ಮಾಡತಕ್ಕಂಥದ್ದಕ್ಕೆ ಸಿದ್ಧನಿದ್ದಾನೆ. ಆದ್ದರಿಂದ ಸರ್ಕಾರದ ನಿಲುವು ಸ್ಪಷ್ಟವಾಗಬೇಕು. ಕೇಂದ್ರ ಸರ್ಕಾರವನ್ನು ತೋರಿಸಿಕೊಂಡು ರಾಜ್ಯ ಸರ್ಕಾರ ತಮ್ಮ ಜವಾಬ್ದಾರಿಯಿಂದ ಹಿಂದೆ ಸರಿಯುತ್ತಿದೆ.ಬೇರೆ ಬೇರೆ ರಾಜ್ಯಸರ್ಕಾರಗಳು ಯಾವ ರೀತಿ ಹಣವನ್ನು ತುಂಬಿಕೊಟ್ಟಿದೆ. ಆ ರೀತಿ ರೈತರಿಗೆ ಪರಿಹಾರವನ್ನು ಒದಗಿಸಿಕೊಡಬೇಕೆಂದು ವಿನಂತಿಸುತ್ತಿದ್ದೇನೆ. ಅದು ಆಗುವುದಿಲ್ಲವೆನ್ನುವುದಾರೆ ಸ್ಪಷ್ಟಮಾಡಲಿ.

ನಾವು ಸಾಲ ಮನ್ನಾ ಮಾಡುವುದಿಲ್ಲವೆಂದರೆ ರೈತ ತನ್ನದೇ ಆದ ತೀರ್ಪು ತೆಗೆದುಕೊಳ್ಳುತ್ತಾನೆ. ಅದು ಬಿಟ್ಟು ಅವನನ್ನು ತ್ರಿಶಂಕು ಸ್ವರ್ಗದಲ್ಲಿಟ್ಟು, ಇತ್ತ ಸಾಲವನ್ನೂ ಮನ್ನಾ ಮಾಡುವುದಿಲ್ಲ. ಅತ್ತ ಬೆಳೆ ಸಾಲವನ್ನೂಕೊಡುವುದಿಲ್ಲ. ಇವತ್ತು ರೈತನಿಗೆ ಬೆಳೆ ಸಾಲ ಸಿಕ್ಕುತ್ತಿಲ್ಲ. 5,000 ಕ್ಕೆ 5000 ಬಡ್ಡಿ ಆಗಿದೆ. ಜನರ ಪ್ರತಿನಿಧಿಗಳಾದ ಎಲ್ಲರಿಗೂ ರೈತರ ಬಗ್ಗೆ ಕಳಕಳಿ ಇದೆ. ರೂಲಿಂಗ್ ಪಾರ್ಟಿಯವರು ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ವಿ.ಪಿ.ಸಿಂಗ್ ಸರ್ಕಾರ ಬಂದಾಗ ಅನೇಕ ಆಶ್ವಾಸನೆಗಳನ್ನು ಕೊಟ್ಟಿದೆ ಇವತ್ತು ಅನೇಕ ತೊಡಕುಗಳಿರಬಹುದು. ಅದಕ್ಕೆ ನಾನು ಹೇಳಿದೆ, ಪ್ರಧಾನಿಯವರಿಗೆ ಒಂದು ಮನವಿಯನ್ನು ಕೊಡೋಣ ಎಂದು. ಪ್ರಧಾನಿಯವರಿಗೆ ಪತ್ರ ಬರೆದ ಮೇಲೆ ಅವರಿಂದ ಏನು ಉತ್ತರ ಬಂತು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಲಿಲ್ಲ. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳವರಿಗಿನ ಸಾಲ ಮನ್ನಾ ಆಗಿದೆ. ನೀವು ಕೇಳಬೇಕಾಗಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದೇ ಮುಖ್ಯ ಮಂತ್ರಿಗಳು ಇವತ್ತೂ ಇದ್ದಾರೆ. ಕೇಂದ್ರ ಸರ್ಕಾರದಲ್ಲಿ ಅವರದ್ದೇ ಸರ್ಕಾರ ಬಂದಿದೆ. ಈ ಬಗ್ಗೆ ಕೂಡಲೇ ಒಂದು ಸಭೆ ಕರೆದು ಮಾತನಾಡಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಇವತ್ತು ಅವರು ಏನು ಆಶ್ವಾಸನೆಗಳನ್ನು ಕೊಟ್ಟಿದ್ದರು ಇವತ್ತು ಅದನ್ನು ಜಾರಿಗೆ ತರುವುದಕ್ಕೆ ತೊಡಕು ಇರಬಹುದು. ಒಟ್ಟಿನಲ್ಲಿ ನಮಗೆ ಹೆಮ್ಮೆ ಇದೆ. ನಮ್ಮ ಸರ್ಕಾರ ಇದ್ದಾಗ 10 ಸಾವಿರ ರೂಪಾಯಿಗಳವರೆಗೆ ರೈತರ ಸಾಲವನ್ನು ಮನ್ನಾ ಮಾಡಿದ್ದೇವೆ. ಆ ಪ್ರಕಾರ 12 ಸಾವಿರ ಕೋಟಿ ರೂಪಾಯಿಗಳ ಸಾಲ ಮನ್ನಾ ಆಗಿದೆ. ಇನ್ನೂ ಕೆಲವು ರೈತರಿಗೆ ಅದರ ಲಾಭ ಸಿಗಬೇಕಾಗಿದೆ. ಅದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ನಾವು ಕೂಡ ಸಾಲವನ್ನು ಮನ್ನಾ ಮಾಡಬೇಕೆಂದು ಹೇಳುತ್ತೇವೆ. ಆದರೆ ಯಾವುದೇ ಪಕ್ಷದ ಒಂದು ಸ್ಪಷ್ಟವಾದ ನೀತಿ ಇರಬೇಕಾಗುತ್ತದೆ. ನಿಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಹೇಳಿದ್ದಿರೇನು? ಇಲ್ಲ. ನಾನು ನಮ್ಮ ಪ್ರಣಾಳಿಕೆಯಲ್ಲಿ ಹಾಕಿದ್ದೇವೆ. ಸಾಲ ಮನ್ನಾ ಮಾಡಿದರೆ ನಾವು ಸ್ವಾಗತಿಸುತ್ತೇನೆ. ಇಲ್ಲದಿದ್ದರೆ ಸುಮ್ಮನೆ ಯಾರನ್ನೂ ತಪ್ಪು ದಾರಿಗೆ ಎಳೆಯುವುದು ಬೇಡ. ನಿಮಗೆ ರೈತರ ಬಗ್ಗೆ ಹೇಗೆ ಕಳಕಳಿ ಇದೆಯೋ ಹಾಗೆ ನಮಗೂ ಇದೆ. ನಮ್ಮ ಪ್ರಣಾಳಿಕೆಯಲ್ಲಿ ಹಾಕಿದ್ದೇವೆ. ಆ ಪ್ರಕಾರ ಹಿಂದೆ ಮನ್ನಾ ಮಾಡಿದ್ದೇವೆ. ಈಗ ಆ ಸಮಸ್ಯೆ ಉಳಿದಿದೆ ಅದನ್ನು ಬಗೆಹರಿಸಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಫರ್ಟಿಲೈಸರ್ ಬಗ್ಗೆ ಡೆಲ್ಲಿಗೆ ಹೋದಾಗ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕಾಗುತ್ತದೆ.ಪದೇ ಪದೇ ಇದೇ ಪ್ರಸ್ತಾಪ ಮಾಡುತ್ತಾ ಹೋದರೆ ಏನು ಮಾಡುವುದಕ್ಕಾಗುತ್ತದೆ? ಯಾವ ಸರ್ಕಾರವಾಗಲಿ, ಯಾವ ಮುಖ್ಯಮಂತ್ರಿಗಳಾಗಲಿ ಮಾಡುವುದಕ್ಕಾಗುವುದಿಲ್ಲ. ಸಮಸ್ಯೆಯನ್ನು ಬಗೆಹರಿಸಬೇಕಾದರೆ ಪ್ರಾಮಾಣಿಕ ಪ್ರಯತ್ನ ಆಗಬೇಕಾಗಿದೆಯೇ ಹೊರತು ಬೇರೆ ಇಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಾನ್ಯ ಬಿ.ಜೆ.ಪಿ. ಸ್ನೇಹಿತರು ಹೇಳಿದ ಹಾಗೆ ನಮಗೂ ಸ್ಪಷ್ಟವಾಗಬೇಕು. 15ರಂದು ನಾವು ಅಖಿಲ ಭಾರತ ಮಟ್ಟದ ರೈತರ ಸಮ್ಮೇಳನವನ್ನು ಡೆಲ್ಲಿಯಲ್ಲಿ ಮಾಡಿದ್ದೇವೆ. ಅಲ್ಲಿಗೆ ಮಧ್ಯ ಪ್ರದೇಶ ಮತ್ತು ಉತ್ತರ ಪ್ರದೇಶದ ರೈತರು ಬಂದಿದ್ದರು. ಅವರು ಸ್ಕೀಂ ಮಾಡಿ ಕಳುಹಿಸಿದ್ದೇವೆ. ಆದರೆ ಅ ಇಂಪ್ಲಿಮೆಂಟ್ ಆಗಿಲ್ಲವೆಂದು ಹೇಳಿದರು. ನಾನು ನಿನ್ನೆತಾನೇ ಡೆಲ್ಲಿಯಿಂದ ಬಂದೆ. 15ರಂದು ಸಮಾವೇಶವಾಗಿದ್ದು ಅಖಿಲ ಭಾರತ ಮಟ್ಟದ ರೈತರ ವೇದಿಕೆಯಲ್ಲಿ ಎಲ್ಲಾ ರಾಜ್ಯದ ರೈತರು ಹೇಳಿದರು ಈಗ ಏನು ಸ್ಕೀಂ ಬಂದಿದೆ ಅದು ಇನ್ನೂ ಇಂಪ್ಲಿಮೆಂಟ್ ಆಗಿಲ್ಲ. ಬೇರೆ ಬೇರೆ ರಾಜ್ಯಗಳು ಸ್ಕೀಂ ತಯಾರಿಸಿ ಕೊಟ್ಟಿದ್ದಾರೆ. ಅದು ಇಂಪ್ಲಿಮೆಂಟ್ ಆಗಿಲ್ಲವೆಂದು ಹೇಳಿದರು.ಅಕ್ಟೋಬರ್ 2 ರಂದು ಅದರ ವಿರುದ್ಧ ಕಾರ್ಯಕ್ರಮ ಹಾಕೋಣವೆಂದು ತೀರ್ಮಾನಿಸಿದ್ದೇವೆ. ಬೇರೆ ರಾಜ್ಯಗಳು ಇಂಪ್ಲಿಮೆಂಟ್ ಮಾಡಿದ್ದರೆ ಅದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರದ ಹತ್ತಿರ ಮಾಹಿತಿ ಇದೆ. ಮಧ್ಯ ಪ್ರದೇಶದಲ್ಲಿ 625 ಕೋಟಿ ರೂಪಾಯಿ ಸಾಲ ಮನ್ನಾ ಮಾಡಿದ್ದೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ವಿ.ಪಿ. ಸಿಂಗ್ ಅವರು ಪ್ರಧಾನಿಯಾಗಿದ್ದಾಗ ಆ ಕಾರ್ಯ ನಡೆದಿದೆ. ನಾನು ಯಾವುದೇ ಪಕ್ಷವನ್ನು ಟೀಕೆ ಮಾಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಪಕ್ಷದ ಗದ್ದಲದಲ್ಲಿ ರೈತರನ್ನು ತುಳಿಯುವುದು ಬೇಡ. ರೈತರ ಬಗ್ಗೆ ನಮ್ಮ ಪಕ್ಷ, ನಿಮ್ಮ ಪಕ್ಷ ಎಂಬ ಗದ್ದಲ ಬೇಡ. ಸರ್ಕಾರ ಒಂದು ಪ್ರಮಾಣಿಕ ತೀರ್ಮಾನಕ್ಕೆ ಬರಬೇಕು.

ಶ್ರೀ ಟಿ.ಎಂ. ಮಂಜುನಾಥ್ : ಈ ವಿಚಾರ ಶಾಸನಸಭೆ ಪ್ರಾರಂಭವಾದಾಗಿನಿಂದ ಮತ್ತು ಕೇಂದ್ರ ಸರ್ಕಾರ ಆದೇಶ ಕೊಟ್ಟಮೇಲೆ ಪ್ರತಿಯೊಂದು ಸಭೆಯಲ್ಲಿ ಮಾನ್ಯ ಮಿತ್ರರು ಚರ್ಚೆ ಮಾಡಿದ್ದಾರೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಕಾರ್ಯಕ್ರಮ ಹಾಕಿಕೊಂಡಿದ್ದೇವೆ, ಅದರ ಪ್ರಕಾರ ಅನೇಕ ರೈತರಿಗೆ ಸಾಲ ಮನ್ನಾ ಮಾಡಿದ್ದೇವೆಂದು ತಿಳಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ರೈತರ ಮನೆ ಜಪ್ತಿ ಮಾಡಿದ್ದೀರಿ.

ಶ್ರೀ ಟಿ.ಎಂ. ಮಂಜುನಾಥ್ : ತಾವು ಸರ್ಕಾರ ನಡೆಸಬೇಕಾದರೆ ಗೊತ್ತಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ, ಅಧಿಕಾರಿಗಳು ಕಾನೂನು ಉಲ್ಲಂಘನೆ ಮಾಡಿದ್ದರೆ ಆದೇಶ ಕೊಡುತ್ತೇವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ರೈತರಿಗೆ ತೊಂದರೆ ಕೊಡುವುದಿಲ್ಲವೆಂದು ಅವರು ಸ್ಪಷ್ಟಪಡಿಸಿದ್ದಾರೆ.

ನಮ್ಮ ಯಡಿಯೂರಪ್ಪನವರು ಪದೇ ಪದೇ ಎದ್ದು ಅದನ್ನೇ ಹೇಳುತ್ತಾ ಇದ್ದರೆ ಈ ಸದನದಲ್ಲಿ ಎಷ್ಟರಮಟ್ಟಿಗೆ ಅದಕ್ಕೆ ಬೆಲೆ ಇರುತ್ತದೆ, ಮಾನ್ಯತೆ ಇರುತ್ತದೆ ಎಂಬುದನ್ನು ತಾವು ಅಧ್ಯಕ್ಷರು ಮಾನ್ಯತೆ ಕೊಡಬೇಕಾದರೆ ತಾವು ತಿಳಿದುಕೊಳ್ಳಬೇಕು.ಸರ್ಕಾರದ ಪರವಾಗಿ ತಮಗೆ ನಾನು ಹೇಳುತ್ತಿದ್ದೇನೆ. ಪದೇಪದೇ ಸರ್ಕಾರದ, ಸದನದ ಕಾರ್ಯಕಲಾಪಗಳಿಗೆ ದಯವಿಟ್ಟು ಅಡ್ಡಿ ಮಾಡದಂತೆ ಮಾಡಬೇಕು. ಮಾಜಿ ಮಂತ್ರಿಗಳೂ ವಿರೋಧಪಕ್ಷದ ನಾಯಕರೂ ಆದ ಮಾನ್ಯ ದೇಶಪಾಂಡೆಯವರು ಹೇಳಿದಹಾಗೆ ತಾವು ಡೆಲ್ಲಿಗೆ ಹೋಗುತ್ತಿದ್ದೀರಿ. ಪ್ರಧಾನ ಮಂತ್ರಿಗಳನ್ನು ಕಾಣಿ. ತಮ್ಮ ನಾಯಕರಿದ್ದಾರೆ. ಅವರನ್ನೂ ಕಾಣಿ. ಅವರನ್ನೂ ಕರೆದುಕೊಂಡು ಹೋಗಿ. ರೈತರ ಸಮಸ್ಯೆಯನ್ನು ತಮ್ಮ ಕೈಲಾದ ಮಟ್ಟಿಗೆ ಪ್ರದರ್ಶನ ಮಾಡಿ ಏನು ರಿಯಾಯಿತಿ ದೊರಕಬೇಕೋ ಅದನ್ನು ದೊರಕಿಸಿಕೊಳ್ಳುವುದಕ್ಕೆ ಸರ್ವಪಕ್ಷಗಳೂ ಸಹ ಕಾರ್ಯೋನ್ಮುಖರಾಗಬೇಕೆಂಬ ದೃಷ್ಟಿಯಿಂದ ಹೇಳಿ ದಯಮಾಡಿ ಇಲ್ಲಿಗೆ ಸಮಾಪ್ತಿ ಮಾಡಬೇಕೆಂದು ಅಧ್ಯಕ್ಷರ ಮೂಲಕ ತಮಗೆ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮ ಅಭಿಪ್ರಾಯ ಹೇಳಿದ್ದೀರಿ ಸ್ವಾಮಿ. ಇಲ್ಲಿಷ್ಟೆ. ನಾವು ಏನು ರಾಜ್ಯದ ರೈತ ಸಮೂಹಕ್ಕೆ ಸಾಲ ಮನ್ನಾ ಆಗುತ್ತದೆಂದು ಆಶ್ವಾಸನೆ ಕೊಟ್ಟಿದ್ದೆವು. ಹಾಗೆಯೇ ಸಾಲ ಮನ್ನಾ ಆಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳೂ ಸಹ ಭರವಸೆ ಕೊಟ್ಟಿದ್ದರು. ಅದು ಈಡೇರಿಲ್ಲ. ರೈತ ಇವತ್ತು ತ್ರಿಶಂಕುಸ್ವರ್ಗದಲ್ಲಿದ್ದಾನೆ. ಅವನ ಪರವಾಗಿ ಇಲ್ಲಿ ಮಾತನಾಡಲಿಲ್ಲ ಎಂಬ ಆರೋಪಕ್ಕೆ ಗುರಿಯಾಗುವುದು ಸ್ವಾಭಾವಿಕ. ಇಲ್ಲಿ ನಾನು ರಾಜಕೀಯ ಮಾಡುತ್ತಿಲ್ಲ ಸ್ವಾಮಿ. ಇವತ್ತು ಇದರಲ್ಲಿ ಬಿ.ಜೆ.ಪಿ. ಕಾಂಗ್ರೆಸ್ ಮತ್ತು ಜನತಾ ದಳ ತರುತ್ತಿಲ್ಲ. ಇವತ್ತು ಕೇವಲ ಆಶ್ವಾಸನೆ ಕೊಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ, ಮುಖ್ಯಮಂತ್ರಿಗಳು ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಏನು ಆಶ್ವಾಸನೆ ಕೊಟ್ಟಿದ್ದರು ಅದು ಬಿಟ್ಟು ಸತ್ಯಕ್ಕೆ ದೂರವಾದ ಸಂಗತಿಯನ್ನು ಸಾಲ ಮನ್ನಾ ಆಗಿದೆ ಎಂದು ಹೇಳಿಕೊಂಡು ಅದನ್ನು ಇವತ್ತು ಕಾರ್ಯರೂಪಕ್ಕೆ ತರುತ್ತಿಲ್ಲ. ಹಿಂದೆ ಆದರೆ ವಿ.ಪಿ.ಸಿಂಗ್ ಅವರು ಪ್ರಧಾನ ಮಂತ್ರಿಯಾಗಿದ್ದರು. ಈಗ ಅವರದೇ (ಕಾಂಗ್ರೆ) ಸರ್ಕಾರ ಇದೆ. ಅವರ ಪಕ್ಷದವರೇ ಪ್ರಧಾನಿ ಇದ್ದಾರೆ. ಇವತ್ತು ನಾನು ಸಮಯ ಹಾಳು ಮಾಡುತ್ತಿಲ್ಲ. ಕೋಟ್ಯಾಂತರ ರೈತರ ಪರವಾಗಿ..

ಅಧ್ಯಕ್ಷರು : ನಾನು ಒಟ್ಟಿನಲ್ಲಿ ಏನು ತೀರ್ಮಾನಕ್ಕೆ ಬಂದಿದ್ದೇನೆ ಎಂದರೆ, ಈ ಬೇಡಿಕೆಗಳ ಬಗ್ಗೆ ಚರ್ಚೆಗೆ ನಿಮಗೆ ಇಷ್ಟ ಇಲ್ಲ, ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ ದಯಮಾಡಿ ಸಭಾ ನಾಯಕರನ್ನು ತಮ್ಮ ಕೊಠಡಿಗೆ ಕರೆದು ಚರ್ಚೆ ಮಾಡಿ. ರೈತರನ್ನು ತ್ರಿಶಂಕು ಸ್ವರ್ಗದಲ್ಲಿಡುವುದು ಬೇಡ. ಒಂದು ತೀರ್ಮಾನ ತೆಗೆದುಕೊಂಡು ಪರಿಹಾರ ಕೊಡಬೇಕು. ಹೊಸ ಬೆಳೆ ಸಾಲ ರೈತರಿಗೆ ಸಿಗಬೇಕು ಎಂದು ವಿನಂತಿ ಸ್ವಾಮಿ.

ಅಧ್ಯಕ್ಷರು : ಈಗ ಸಭಾ ನಾಯಕರನ್ನು, ನಿಮ್ಮನ್ನು ಮತ್ತು ವಿರೋಧಪಕ್ಷದ ನಾಯಕರನ್ನು ಎಲ್ಲರನ್ನೂ ನನ್ನ ಛೇಂಬರ್‌ಗೆ ಕರೆದು ಮಾತನಾಡಿ ಅದರಿಂದ ಬರತಕ್ಕ ಫಲಶೃತಿ ಏನು ಎಂಬುದನ್ನು ನಾನು ಆಗಲೇ ಕಲ್ಪಿಸಿಕೊಂಡಿದ್ದೇನೆ. ಏನಾಗುತ್ತದೆ? ಅವರು ಈಗಾಗಲೇ ಹೇಳಿದ್ದಾರೆ. ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರು. ಇದು ಕೇವಲ ಒಂದು ರಾಜ್ಯ ಸರ್ಕಾರ ಮಾಡತಕ್ಕದ್ದಲ್ಲ, ಎಲ್ಲ ರಾಜ್ಯ ಸರ್ಕಾರಗಳೂ ಒಟ್ಟಾಗಿ ಸೇರಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕು ಎಂದು ಹೇಳಿದರು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸೂಚನೆ ಕೊಟ್ಟಿದ್ದಾರೆ. ರಸಗೊಬ್ಬರದ ವಿಚಾರದಲ್ಲಿ ಒಂದು ನಿಯೋಗ ಕೇಂದ್ರ ಮಂತ್ರಿಮಂಡಲದ ಪ್ರಧಾನ ಮಂತ್ರಿಯವರನ್ನು ನೋಡುವುದಕ್ಕೆ ಹೋಗುತ್ತಿದ್ದೇವೆ. ಅದರ ಜೊತೆಗೆ ನಿಯೋಗ ಈ ವಿಚಾರವನ್ನು ಕೂಡ ಕೈಗೆತ್ತಿಕೊಂಡು ಸಂಬಂಧಪಟ್ಟವರ ಜೊತೆಯಲ್ಲಿ ಮಾತುಕತೆ ನಡೆಸಿ ರೈತರಿಗೆ ಇದರಿಂದ ಆಗಬಹುದಾದ ಅನುಕೂಲ ಕಲ್ಪಿಸಿಕೊಡತಕ್ಕ ಭೂಮಿಕೆ ಈಗಾಗಲೇ ಸಿದ್ಧವಾಗಿದೆ ಎಂದು ಹೇಳಿದ್ದಾರೆ. ಇನ್ನು ಎರಡು ದಿವಸದಲ್ಲಿ ಏನಾಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಕೇಂದ್ರ ಸರ್ಕಾರ..

ಅಧ್ಯಕ್ಷರು : ಇದಕ್ಕಿಂತ ಇನ್ನೇನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೇವಲ ರೈತರ ಪರವಾಗಿ ಆಶ್ವಾಸನೆ ಕೊಟ್ಟು ಈಡೇರಿಸಲಿಲ್ಲ ಎಂದು ನನ್ನ ಸಮಾಧಾನಕ್ಕೋಸ್ಕರ, ನಾವು ಕೊಟ್ಟ ಆಶ್ವಾಸನೆ ಈಡೇರಿಸದೆ ಸರ್ಕಾರ ಜನತೆಗೆ ದ್ರೋಹ ಮಾಡುತ್ತಿದೆ ಎಂಬುದನ್ನು ಜನತೆಗೆ ತಿಳಿಸುವುದಕ್ಕೋಸ್ಕರ, ಪ್ರಾಯಶ್ಚಿತ್ತಕ್ಕೋಸ್ಕರ ಇವತ್ತು ಸಾಯಂಕಾಲದವರೆಗೆ ಧರಣಿ ಕುಳಿತುಕೊಳ್ಳುತ್ತಿದ್ದೇವೆ.

ಅಧ್ಯಕ್ಷರು : ಈಗ ಮಾನ್ಯ ವಿರೋಧಪಕ್ಷದ ನಾಯಕರು ಭಾಷಣ ಮಾಡದಿದ್ದರೆ ನಾನು ಬೇರೆಯವರನ್ನು ಕರೆಯಬೇಕಾಗುತ್ತದೆ.

(ಶ್ರೀ ಬಿ.ಎಸ್. ಯಡಿಯೂರಪ್ಪನವರು ಧರಣಿಗೆ ಬಂದರು)

ಶ್ರೀ ಡಿ.ಬಿ. ಚಂದ್ರೇಗೌಡ : ವಾತಾವರಣ ಇಲ್ಲವಲ್ಲ.

ಅದ್ಯಕ್ಷರು : ವಾತಾವರಣ ಇದೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಒಂದು ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಅವರ ಮನವಿ ಕೇಳೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ನೋಡಿ ಹೀಗಾದರೆ ಹೇಗೆ?

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸಭೆಯ ಅಧ್ಯಕ್ಷರಾಗಿ ತಾವೂ ಕೂಡ ವಿನಂತಿ ಮಾಡಿದ್ದೀರಿ. ತಾವು ವಿನಂತಿ ಮಾಡಿದ್ದರೂ ಕೂಡ ಅವರು ಸಾಯಂಕಾಲದವರೆಗೆ ಧರಣಿ ಮಾಡುತ್ತೇವೆ ಎಂದರೆ ಇದು ಸದನಕ್ಕೆ ಶೋಭೆ ತರುವುದಿಲ್ಲ, ತಾವೂ ಕೂಡ ವಿನಂತಿ ಮಾಡಿದ್ದೀರಿ. ಸರ್ಕಾರದ ಪರವಾಗಿ ನಾವು

ವಿನಂತಿ ಮಾಡಿದ್ದೇವೆ. ವಿರೋಧ ಪಕ್ಷದ ನಾಯಕರೂ ವಿನಂತಿ ಮಾಡಿದ್ದಾರೆ. ಎಲ್ಲರೂ ವಿನಂತಿ ಮಾಡಿದಾಗ ಇವರು ಧರಣಿ ಮಾಡುವುದು ಸರಿಯಲ್ಲ. ನಾನು ಕೂಡ ಮತ್ತೊಂದು ಸಾರಿ ವಿನಂತಿ ಮಾಡುತ್ತೇನೆ. ಈ ವಿಷಯವನ್ನು ಕೇಂದ್ರಕ್ಕೆ ಹೇಳತಕ್ಕ ಕಾರ್ಯಕ್ರಮ ಈಗಾಗಲೇ ನಡೆದಿದೆ. ಆ ಕಾರ್ಯಕ್ಕೆ ಎಲ್ಲರೂ ಹೋಗುತ್ತಿದ್ದೇವೆ. ಎಲ್ಲ ಪಕ್ಷದ ಸದಸ್ಯರೂ ಹೋಗುತ್ತಿದ್ದೇವೆ. ಮಾನ್ಯ ಯಡಿಯೂರಪ್ಪನವರು, ವಿರೋಧ ಪಕ್ಷದ ನಾಯಕರು ಇವತ್ತು ಚರ್ಚೆಯಲ್ಲಿ ಭಾಗಿಯಾಗುವುದಕ್ಕೆ ಅನುವು ಮಾಡಿಕೊಡಬೇಕೆಂದು ಮತ್ತೊಂದು ಸಾರಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ನಾನು ವಿರೋಧಪಕ್ಷದ ನಾಯಕರ ಹತ್ತಿರ ಮಾತನಾಡಿದೆ. ಸದನದಲ್ಲಿ ಅಂದರೆ ಇಲ್ಲಿ ನಡೆಯತಕ್ಕ ಚರ್ಚೆಗೂ ತೆರೆಯ ಮರೆಯಲ್ಲಿ ನಡೆಯತಕ್ಕ ಚರ್ಚೆಗೂ ಬಹಳ ವ್ಯತ್ಯಾಸ ಇರುತ್ತದೆ. ದಯಮಾಡಿ ತಾವು ಚರ್ಚೆಗೆ ಅವಕಾಶ ಕಲ್ಪಿಸಿಕೊಡಿ. ನಾವು ಅವರ ಧರಣಿಗೆ ಸಂಪೂರ್ಣ ಬೆಂಬಲ ಕೊಡುತ್ತೇವೆ. ಆಗುವುದೇ ಇಲ್ಲ ಎಂದರೆ ತಮಗೆ ಬಿಟ್ಟಿದ್ದು.

ಅಧ್ಯಕ್ಷರು : ಇದಕ್ಕಿಂತ ಇನ್ನೇನೂ ಹೆಚ್ಚು ಮಾಡುವುದ್ಕಕೆ ಸಾಧ್ಯವಾಗುವುದಿಲ್ಲ, ನನ್ನ ಅಸಹಾಯಕತೆಯನ್ನು...

ಶ್ರೀ ವಾಟಾಳ್ ನಾಗರಾಜ್ : ಆಯಿತು. ನಾವು ಧರಣಿ ಮಾಡದೆ ವಿಧಿ ಇಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ. ನೀವು ಧರಣಿ ನಡೆಸುತ್ತಿರಿ, ನಾವು ಸಭೆ ನಡೆಸುತ್ತೇವೆ ಎಂದರೆ ನಾವು ವಿಧಿ ಇಲ್ಲ, ಧರಣಿ ಮಾಡಲೇಬೇಕಾಗುತ್ತದೆ.

(ಶ್ರೀ ವಾಟಾಳ್ ನಾಗರಾಜ್ ಅವರು ಧರಣಿ ಮಾಡಲು ಅಂಗಳಕ್ಕೆ ಬಂದರು)

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, 20ನೇ ತಾರೀಖು ಸರ್ವಪಕ್ಷಗಳ ನಿಯೋಗ ದೆಹಲಿಗೆ ಹೋಗುತ್ತದೆ. ಸರ್ಕಾರ ತನ್ನ ನಿರ್ದಿಷ್ಟವಾದ ನಿಲುವನ್ನು ಹೇಳಿದರೆ..

ಅಧ್ಯಕ್ಷರು : ನಿರ್ದಿಷ್ಟವಾಗಿ ಹೇಳಿದ್ದಾರೆ. ಸರ್ಕಾರದವರು ಸ್ಪಷ್ಟವಾಗಿ ಹೇಳಿದ್ದಾರೆ. ಅದು ನಿಮಗೆ ಅಸ್ಪಷ್ಟವಾಗಿ ಕೇಳಿಸಿದೆ ಅಷ್ಟೇ.

ಶ್ರೀ ರಾಮಾನಾಥ ರೈ : ಬಿ.ಜೆ.ಪಿ. ಹಾಗೂ ಕನ್ನಡ ಚಳುವಳಿ ಪಕ್ಷಗಳೆರಡೂ ಇಲ್ಲಿ ಒಟ್ಟಾಗಿ ಧರಣಿ ಕುಳಿತಿರುವುದನ್ನು ನೋಡಿದರೆ ಶಿವಸೇನ ಮತ್ತು ಬಿಜೆಪಿ ಒಂದಾಗಿರುವುದು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : 5 ಗಂಟೆಗೆ ಮುಗಿಸುವ ಸಭೆಯನ್ನು 6 ಗಂಟೆವರೆಗೆ ಮುಂದುವರಿಸಿದರೆ ಏನೂ ನಷ್ಟವಾಗುವುದಿಲ್ಲ. ಒಂದು ಪ್ರಯತ್ನವನ್ನು ಮಾಡುವುದು ಸಭೆಯ ಸಂಪ್ರದಾಯದ ದೃಷ್ಟಿಯಿಂದ ಸರಿಯೆಂದು ಕಾಣುತ್ತದೆ. ತಾವು ಎರಡು ನಿಮಿಷ ಅವಕಾಶ ಕೊಟ್ಟರೆ, ಬಹಳ ಹೆಚ್ಚು ಮಾತನಾಡುವುದು ಅವಶ್ಯಕತೆ ಇಲ್ಲ. ಏನಾದರೂ ದಾಖಲೆಗಳು ಇದ್ದರೆ ಹೀಗೆ ಎಂದು ಹೇಳಿ ಅವರ ಗಮನಕ್ಕೆ ತರಬಹುದು. ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

ಅಧ್ಯಕ್ಷರು : ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಹೇಳಿಲ್ಲವೇ? ನಿಮ್ಮ ಹತ್ತಿರ ದಾಖಲೆಗಳು ಇದ್ದರೆ ನನಗೆ ಕಳುಹಿಸಿಕೊಡಿ ಎಂದು ಹೇಳಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಅವರು ಹೇಳಿಲ್ಲವೇ? ಅದನ್ನು ನೀವು ಕೇಳಿಸಿಕೊಂಡಿಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಹೇಳಿದ್ದು ಕೇಳಿಸಿದೆ.

ಅಧ್ಯಕ್ಷರು : ಮುಖ್ಯಮಂತ್ರಿಗಳು ಹೇಳಿದರೋ ಇಲ್ಲವೋ?

ಶ್ರೀ ಡಿ.ಬಿ. ಚಂದ್ರೇಗೌಡ : ಈಗಲೇ ನೋಡಿಬಿಡಬಹುದು ಎಂದೆ.

ಅಧ್ಯಕ್ಷರು : ನಮ್ಮ ಸದನದ ಯಾವ ಇತಿಹಾಸವನ್ನೇ ತೆಗೆದುಕೊಂಡು ನೋಡಿ. ಈಗಲೇ ನೋಡಿಬಿಡಿ, ಹಾಗೆ ಎಂದು ಹೇಳಿ..

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ನೋಡಿ ಬಿಡಿ ಎಂದು ಆದೇಶ ಕೊಡಲಿಲ್ಲ, ನಾನು ತಮ್ಮ ಅಪ್ಪಣೆ ಕೇಳಿದೆ.

ಅಧ್ಯಕ್ಷರು : ಹಾಗೆ ಹೇಳಿ ಸಭೆಯನ್ನು ನಡೆಸಬಹುದೇ?

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಮನಸ್ಸು ಮಾಡಿದರೆ ಸಾಧ್ಯವಾಗುತ್ತದೆ.

ಅಧ್ಯಕ್ಷರು : ನೀವೂ ಸರ್ಕಾರವನ್ನು ನಡೆಸಿರುವವರಿದ್ದೀರಿ. ಸರ್ಕಾರ ನಡೆಸತಕ್ಕ ರೀತಿ ನೀತಿ, ಸರ್ಕಾರ ಎಷ್ಟು ವಿಧಾನ ಹೋಗಬಹುದು, ಎಷ್ಟು ವೇಗವಾಗಿ ಹೋಗಬಹುದು ಎನ್ನುವುದಕ್ಕೆ ಇತಿಮಿತಿಗಳು ಇವೆ ಎಂಬುದನ್ನು ತಾವು ಅರ್ಥಮಾಡಿಕೊಂಡಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರನ್ನು ಬಾವಿಯಲ್ಲಿ ಕೂರಿಸಿಕೊಂಡು ಚರ್ಚೆ ಮಾಡುವ ಬದಲು ಒಂದು ಪ್ರಯತ್ನ ಮಾಡೋಣ. ಏಕೆಂದರೆ, ಪ್ರಯತ್ನ ಮಾಡಲಿಲ್ಲ ಎಂದು ಒಂದು ಮಾತು ಬರಬಾರದು.

ಅಧ್ಯಕ್ಷರು : ಸದಸ್ಯರು ಬಾವಿಯಲ್ಲಿ ಕುಳಿತಿದ್ದಾಗಲೂ ಸಭೆಯನ್ನು ನಡೆಸಿದ ಎಷ್ಟೋ ನಿದರ್ಶನಗಳು ಈ ಸಭೆಯಲ್ಲಿ ಆಗಿದೆ. ನಾವು ಮಾಡುವ ಎಲ್ಲಾ ಪ್ರಯತ್ನಗಳನ್ನು ನಾವು ಮಾಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ವಿರೋಧ ಪಕ್ಷದ ಕೆಲವು ಸದಸ್ಯರು ಬಾವಿಯಲ್ಲಿ ಇದ್ದಾಗ ವಿರೋಧಪಕ್ಷದ ನಾಯಕನಾಗಿ ನಾನು ಇಲ್ಲಿ ಮಾತನಾಡುವುದು ನನ್ನ ಮನಸ್ಸಿಗೆ ಸರಿಹೋಗೋದಿಲ್ಲ. ಅದೂ ಬೇಡ ಎಂದರೆ ನಾನು ಮಾತನಾಡುವುದನ್ನು ನಿಲ್ಲಿಸುತ್ತೇನೆ.

ಅಧ್ಯಕ್ಷರು : ನೀವು ನಿಲ್ಲಿಸಿ ಎಂದು ನಾನು ತಮಗೆ ಹೇಳುವುದಿಲ್ಲ. ತಮ್ಮ ಭಾಷಣವನ್ನು ಮುಂದುವರಿಸಿ ಎಂದು ನಾನು ತಮಗೆ ಕೇಳುತ್ತಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ್ : ಸ್ವಾಮಿ ನನ್ನ ಪ್ರಯತ್ನ ಅರ್ಥವಾಯಿತು. ವಿರೋಧ ಪಕ್ಷದ ನಾಯಕರು ಸಮಾದಾನದಿಂದ ಇರಬೇಕು. ಬಾವಿಯಲ್ಲಿ ಇರುವವರ ಮನಸ್ಸನ್ನು ಒಲಿಸಲು ಅವರು ಎಷ್ಟೇ ಅಶ್ವಾಸನೆ ಕೊಟ್ಟರೂ, ನೂರು ಪಟ್ಟು ಅಶ್ವಾಸನೆ ಕೊಟ್ಟರೂ ವಿರೋಧ ಪಕ್ಷದ ನಾಯಕರ ಜೊತೆ ಬಾವಿಯಲ್ಲಿರುವ ಸದಸ್ಯರು ಸಹಕರಿಸುವುದಿಲ್ಲ. ಆದ್ದರಿಂದ ಆ ಪ್ರಯತ್ನವನ್ನು ಬಿಟ್ಟು ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು ಮುಂದುವರಿಸಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : 20ನೇ ತಾರೀಖು ದೆಲ್ಲಿಗೆ ಹೋಗಿ ಬಂದು 27ನೇ ತಾರೀಖಿನ ಒಳಗೆ ಸದನ ಮುಕ್ತಯವಾಗುವುದರೊಳಗೆ ರೈತರ ಸಾಲ ಮನ್ನಾ ಬಗ್ಗೆ ನಿರ್ದಿಷ್ಟವಾದ ನೀತಿಯನ್ನು ಸರ್ಕಾರ ತಾಳಬೇಕು. ರೈತರ ಸಾಲ ಮನ್ನಾ ವಿಚಾರದಲ್ಲಿ ರಾಜಕೀಯ ಪಕ್ಷಗಳು ಹೇಳತಕ್ಕ ಮಾತನ್ನು ರೈತರು ಈಗಾಗಲೇ ಅರಿತಿದ್ದಾರೆ. ರೈತರ ಸಾಲ ಮನ್ನಾ ಬಗ್ಗೆ ರಾಷ್ಟ್ರದಲ್ಲೇ ಪ್ರಥಮ ಬಾರಿಗೆ ಶ್ರೀ

ವಿ.ಪಿ. ಸಿಂಗ್ ಅವರು ಒಂದು ನಿರ್ಧಾರವನ್ನು ತೆಗೆದುಕೊಂಡರು. ಇವತ್ತು ಬಿಜೆಪಿಯವರು ಇಷ್ಟ ಬಂದಹಾಗೆ ಮಾಡುವುದಕ್ಕೆ ಹತ್ತಿದದಾರೆ ಇವತ್ತು ಈ ಬಗ್ಗೆ ನಾನೂ ಕೇಳಿದ್ದೇನೆ. ಮುಖ್ಯಮಂತ್ರಿಗಳೂ ಸಹಾ ಹೇಳಿದ್ದಾರೆ. ಆದರೆ ನಿರ್ದಿಷ್ಟವಾಗಿ ಹೇಳಿ ಈ ಸಮಸ್ಯೆಗೆ ಒಂದು ತೆರೆ ಎಳೆಯಬೇಕು ಇವತ್ತು ರೈತರ ಬಡ್ಡಿ ಜಾಸ್ತಿಯಾಗುತ್ತಿದೆ. ಸಾಲದ ಹೊರೆ ಜಾಸ್ತಾಯಾಗುತ್ತಿದೆ. ಸಾಲ ಮನ್ನಾ ಆಗಬಹುದೆಂದು ಇವತ್ತು ಸಹಕಾರ ಸಂಘಗಳಲ್ಲಿ ವಸೂಲಾತಿ ಆಗುತ್ತಾ ಇಲ್ಲ. ಹಾಗೂ ರೈತರಿಗೆ ಮರು ಸಾಲ ಕೂಡಾ ಸಿಗುತ್ತಾ ಇಲ್ಲ. ರೈತರ ಸಮಸ್ಯೆ ಬಗ್ಗೆ 27ನೇ ತಾರೀಖಿನ ಒಳಗೆ ಸರ್ಕಾರ ನಿರ್ದಿಷ್ಟ ನೀತಿಯನ್ನು ತಾಳಿ ಆ ಬಗ್ಗೆ ಈ ಸಭೆಗೆ ತಿಳಿಸಬೇಕೆಂದು ಹೇಳುತ್ತೇನೆ. ಈ ಬಗ್ಗೆ ಸರ್ಕಾರ ತನ್ನ ಧೋರಣೆಯನ್ನು ತಿಳಿಸಿದರೆ ನಮ್ಮ ಸ್ನೇಹಿತರು ತಮ್ಮ ಧರಣಿ ಮುಕ್ತಾಯ ಮಾಡಿ ಸದನದ ಕಲಾಪದಲ್ಲಿ ಭಾಗವಹಿಸಬಹುದೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೇ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಬನ್ನಿಕೋಡ್ ಅವರು ಒಂದು ವಿನಂತಿಯನ್ನು ಮಾಡಿದರು.

ಅಧ್ಯಕ್ಷರು : ಬನ್ನಿಕೋಡ್ ಅವರು ವಿನಂತಿ ಮಾಡುತ್ತಲೇ ಇದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನೂ ವಿನಂತಿ ಮಾಡಿದ್ದೇನೆ. ಈ ಬಗ್ಗೆ ಅಂತರ್ಯವಾಗಿ ಕುಳಿತು ಚರ್ಚೆ ಮಾಡಿ...

ಅಧ್ಯಕ್ಷರು : ವಿನಂತಿಗೆ ಪ್ರತಿಕ್ರಿಯೆ ಬರಬೇಕಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ : ಬರಬಹುದೆಂದು ನಿರೀಕ್ಷೆ ಮಾಡಿ....

ಅಧ್ಯಕ್ಷರು : ಈಗಲೂ ವಿನಂತಿ ಮಾಡುತ್ತೇನೆ. ನನ್ನ ಪರವಾಗಿ ಮಾಡುತ್ತೇನೆ. ಸಭೆಯ ಪರವಾಗಿ ಮಾಡುತ್ತೇನೆ. ಮಾನ್ಯ ಸದಸ್ಯರು ಎಲ್ಲರೂ ಕೂಡ ತಮ್ಮ ಆಸನಗಳಿಗೆ ಬರಬೇಕೆಂದು ವಿನಂತಿ ಮಾಡುತ್ತೇನೆ. ಮಾನ್ಯ ಸದಸ್ಯರೂ ಕೂಡ ಸರ್ಕಾರಕ್ಕೆ ಈಗಾಗಲೇ ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಸರ್ಕಾರ ಕೂಡ ಈಗಾಗಲೇ ತನ್ನ ಸ್ಪಷ್ಟ ಧೋರಣೆಯನ್ನು ಇಟ್ಟಿದೆ. ದೆಹಲಿಗೆ ನಿಯೋಗ ಹೋಗುತ್ತಾ ಇದೆ. ಆ ನಿಯೋಗದಲ್ಲಿ ಈ ಪ್ರಸ್ತಾವವನ್ನೂ ಕೂಡ ಕೈಗೆತ್ತಿಕೊಂಡು ಸಂಬಂಧಪಟ್ಟವರ ಜೊತೆಯಲ್ಲಿ ಸಮಾಲೋಚನೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ಮಾಡಿಕೊಡುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಆದುದರಿಂದ ಈ ಆಶ್ವಾಸನೆಯ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಎಲ್ಲರೂ ಬಂದು ತಮ್ಮ ಸ್ವಸ್ಥಾನದಲ್ಲಿ ಕುಳಿತು ಈ ಸಭೆಗೆ ಶೋಬೆಯನ್ನು ತರಬೇಕೆಂದು ಮತ್ತೊಮ್ಮೆ ವಿನಂತಿ ಮಾಡುತ್ತೇನೆ.

ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೆ ಭಾರತೀಯ ಜನತಾ ಪಾರ್ಟಿಯ ಸದಸ್ಯರುಗಳು ಅವರು ಬಾವಿಯನ್ನು ಕಂಡು, ಬಾವಿಯನ್ನು ಕಂಡು ಭಾವಿಗೆ ಹೋಗುತ್ತಿದ್ದಾರೆ. ನಿಮ್ಮ ವಿನಂತಿ ಸಹ ಬಾವಿಗೆ ಹೋಗುತ್ತಿದೆ. ಸಭೆಯ ಕಾರ್ಯಕಲಾಪ ಗಳಿಗೆ ಅಡ್ಡಿಯಾಗುವುದು ಬೇಡ. ಸಭೆಯನ್ನು ಮುಂದುವರಿಸಿ, ತಮ್ಮ ಅಪ್ಪಣೆಯನ್ನು ಪಡೆದು ನಾನು ಸಹ ವಿನಂತಿಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ವಿಷಯ ಬಹಳ ಮುಖ್ಯವಾದುದು. ತಾವು ಸ್ವಲ್ಪ ಗಂಭೀರವಾಗಿ ಆಲೋಚನೆಯನ್ನು ಮಾಡಬೇಕು.

ಅಧ್ಯಕ್ಷರು : ಅದಕ್ಕೋಸ್ಕರ ಇಷ್ಟು ಹೊತ್ತು ಅವಕಾಶ ಕೊಟ್ಟಿದ್ದು.

+ ಶ್ರೀ ಟಿ.ಬಿ. ಚಂದ್ರೇಗೌಡ : ನಾನು ಹೇಳಿದ್ದು ಅದಕ್ಕೆ, ಒಂದು ಗಂಟೆ ಏನೂ ಹೆಚ್ಚು ಕಡಿಮೆಯಾಗುವುದಿಲ್ಲ. ಎಲ್ಲಾ ಕಾಲಕ್ಕೂ ನಾವು ಸಹಕರಿಸಿಕೊಂಡು ಬಂದಿದ್ದೇವೆ. ವಿರೋಧಪಕ್ಷದವರು ತಮ್ಮ ಆದೇಶವನ್ನು ಮೀರಿ ನಡೆದಿಲ್ಲ. ನಿನ್ನೆ ಕೂಡ ಒಂದೂವರೆ ಗಂಟೆ ಕಾಲ ಹೆಚ್ಚು ಸಮಯ ಕುಳಿತುಕೊಂಡಿದ್ದೇವೆ. ಆದ್ದರಿಂದ ಹೆಚ್ಚು ಸಮಯ ಕೊಡುವುದಕ್ಕೆ ನಮಗೇನೂ ತೊಂದರೆ ಇಲ್ಲ. ಎರಡು ಕೆಲಸ ಆಗುತ್ತದೆ. ಆದ್ದರಿಂದ ದಯಮಾಡಿ ಒಂದು ಅರ್ಧಗಂಟೆ ಸಭೆಯನ್ನು ಮುಂದಕ್ಕೆ ಹಾಕಿದರೆ ಏನಾದರೂ ಒಂದು ಪರಿಹಾರಕ್ಕೆ ಬರೋಣ.

+ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ ತಮ್ಮ ವಿನಂತಿಗೆ ಮಾನ್ಯ ಭಾರತೀಯ ಜನತಾ ಪಾರ್ಟಿಯ ಸದಸ್ಯರು ಏನು ಹೇಳಿದರೋ ಗೊತ್ತಾಗಲಿಲ್ಲ. ಏಕೆಂದರೆ ಮತ್ತೊಂದು ಭಾರೀ ವಿನಂತಿ ಮಾಡುತ್ತಿದ್ದೀರಿ. ತಮ್ಮ ಸೌಜನ್ಯ ಕೆಡಿಸಿಕೊಳ್ಳದೆ, ತಮ್ಮ ತಾಳ್ಮೆಯನ್ನು ಕಳೆದುಕೊಳ್ಳದೆ ನೀವು ಪ್ರಯತ್ನ ಮಾಡಿದ್ದೀರಿ. ನಾವು ಸದಸ್ಯರೆಲ್ಲರೂ ಹೇಳುವುದೇನೆಂದರೆ ನಮಗೂ ಕೂಡ ಸ್ವಲ್ಪ ತೊಂದರೆಯಾಗಿದೆ. ತಮ್ಮ ಆದೇಶದ ಪ್ರಕಾರ ಕಳೆದ ತಿಂಗಳು 26ರಿಂದ ಇಷ್ಟರ ಹೊತ್ತಿಗೆ ಸಾಕಷ್ಟು ಡಿಮ್ಯಾಂಡ್‌ಗಳು ಡಿಸ್ಕಷನ್ ಆಗಬೇಕಾಗಿತ್ತು. ಇಲ್ಲಿ ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿ ಸಾರ್ವಜನಿಕರ ಹಿತವನ್ನು ರಕ್ಷಣೆ ಮಾಡಬೇಕಾಗಿತ್ತು. ಕೆಲವು ಘಟನೆಗಳು ಬರುತ್ತವೆ. ಅವು ಬಂದಾಗ ಎಷ್ಟೋ ಇತಿಮಿತಿಯನ್ನು ಇಟ್ಟು ನಾವು ಅವುಗಳ ಬಗ್ಗೆ ವ್ಯವಹರಿಸಿದರೆ ಸರಿಯಾಗುತ್ತವೆಯೇ ವಿನಃ ಇಲ್ಲದಿದ್ದರೆ ಆಗುವುದಿಲ್ಲ. ಇವತ್ತು ದೊಡ್ಡ ದೊಡ್ಡ ಡಿಮಾಂಡ್‌ಗಳು ಇವೆ. ಸಾಕಷ್ಟು ಡಿಮಾಂಡ್‌ಗಳು ಒಂದೇ ದಿವಸ ಡಿಸ್ಕಷನ್ ಆಗಬೇಕೆಂದು ಮಾಡಿದ್ದೇವೆ. ನಮ್ಮ ಹಿಂದಿನ ಕಾರ್ಯಕಲಾಪಗಳ ಚರಿತ್ರೆಯನ್ನು ತೆಗೆದುಕೊಂಡು ನೋಡಿದರೆ ಒಂದು ದಿವಸದಲ್ಲಿ ಎಂದೂ ಕೂಡ ಇಷ್ಟು ಡಿಮ್ಯಾಂಡ್‌ಗಳು ಚರ್ಚೆಯಾಗುವುದಕ್ಕೆ ಸಾಧ್ಯವಿಲ್ಲ. ಆದರೂ ಕೂಡ ಇವತ್ತು ಮಾಡಲೇಬೇಕಾಗಿದೆ. ದಿನಾಂಕ 21ಕ್ಕೆ ಸಭೆಯನ್ನು ಮುಂದುವರಿಸಿ ತದನಂತರ [illegible]ಕ್ಕೆ ಸಭೆ ಸೇರಿ ನಂತರ 27ಕ್ಕೆ ಹೋಗುತ್ತದೆಂದು ನಾನು ಊಹೆ ಮಾಡುತ್ತೇನೆ.

ಎಲ್ಲ ಡಿಮ್ಯಾಂಡ್‌ಗಳನ್ನು ಇಲ್ಲಿ ಡಿಸ್ಕಸ್ ಮಾಡುವುದಕ್ಕೆ ಸಾಧ್ಯವಾಗಲಾರದು ಎಂದು ನಾನು ಭಾವಿಸುತ್ತೇನೆ. ಗಿಲಿಟಿನ್ಗೆ ಹಾಕತಕ್ಕ ಪರಿಸ್ಥಿತಿ ಬರುತ್ತದೆಯೋ ಏನೋ ಗೊತ್ತಿಲ್ಲ. ಅದಕ್ಕೆ ತಾವು ಒಪ್ಪಿಗೆ ಕೊಟ್ಟಿದ್ದೀರೋ ಏನೋ ನನಗೆ ಗೊತ್ತಿಲ್ಲ. ಒಂದು ವೇಳೆ ಗಿಲಿಟಿನ್ ಆದರೆ ಸಾರ್ವಜನಿಕರ ಹಿತಕ್ಕೆ ನಾವೆಲ್ಲರೂ ಈ ಸದನದ ಸದಸ್ಯರು, ವಿರೋಧಪಕ್ಷದವರು, ರೂಲಿಂಗ್ ಪಾರ್ಟಿಯವರು ಸ್ವಲ್ಪ ತಪ್ಪು ಮಾಡಿದ್ದೇವೆಂದು ನನಗೆ ಅನಿಸುತ್ತದೆ. ತಾವು ಈವೊಂದು ಹಿನ್ನೆಲೆಯಲ್ಲಿ ಏನು ಮನವಿ ಮಾಡಿಕೊಂಡಿದ್ದೀರಿ. ಅದರ ಪ್ರಕಾರ ಭಾರತೀಯ ಜನತಾ ಪಾರ್ಟಿಯ ಸದಸ್ಯರು ಬಾವಿಯಿಂದ ಮೇಲೆದ್ದು ಬಂದು ತಮ್ಮ ಪೀಠಗಳಲ್ಲಿ ಕುಳಿತು ಚರ್ಚೆಯಲ್ಲಿ ಭಾಗವಹಿಸಿ. ಇವತ್ತು ಮೇಜರ್ ಇರಿಗೇಷನ್ ಮಿಡಿಯಮ್ ಇರಿಗೇಷನ್, ಮೈನರ್ ಇರಿಗೇಷನ್ ಲೋಕೋಪಯೋಗಿ ಇಲಾಖೆಗಳ ಬಗ್ಗೆ ಚಿಂತನೆ ಮಾಡತಕ್ಕದ್ದು ಅವಶ್ಯಕತೆಯಿದೆ. ಅದನ್ನು ಮಾಡದೆ ಧರಣಿ ಮುಖ್ಯವೆಂದು ನಾನು ಹೇಳುವುದಿಲ್ಲ. ಸರ್ಕಾರ ಈಗಾಗಲೇ ಸ್ಪಷ್ಟೀಕರಣ ಮಾಡಿದೆ. ಸರ್ಕಾರದವರು ದಿನಾಂಕ 21ಕ್ಕೆ ನಿಯೋಗ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದ್ದಾರೆ. ಮನಸ್ಸಿನಲ್ಲಿ ಯಾವುದೇ ಸಂಕೋಚವಿಲ್ಲದೆ ಸಹಾಯ ಮಾಡೋಣ. ತಾವು ಪ್ರಸ್ತಾಪ ಮಾಡಿದ್ದೀರಿ. ತಾವೇನು ವಿನಂತಿ ಮಾಡಿದ್ದೀರಿ ಅದಕ್ಕೆ ನಾನು ಕೂಡ ನನ್ನ ವಿನಂತಿಯನ್ನು ಸೇರಿಸುತ್ತೇನೆ. ಮಾನ್ಯ ಸದಸ್ಯರು ಬಾವಿಯಿಂದ ಮೇಲೆದ್ದು ಬಂದು ತಮ್ಮ ಪೀಠಗಳಲ್ಲಿ ಕುಳಿತು ಚರ್ಚೆಯಲ್ಲಿ ಭಾಗವಹಿಸಿ. ವಿರೋಧಪಕ್ಷದ

ನಾಯಕರು ಹೇಳುತ್ತಾರೆ. ಸಭೆಯನ್ನು ಅಡ್ಜರನ್ ಮಾಡಿಸಿಂದ.. ಸಭೆಯನ್ನು ಈಗ ಮುಂದೂಡಿದರೆ ಮತ್ತೆ ಸೇರುವುದು ಎರಡು ಗಂಟೆಯಾಗಬಹುದೆಂದು ಕಾಣುತ್ತದೆ. ರಾತ್ರಿ 7-8ಗಂಟೆಯವರೆಗೆ ಕುಳಿತುಕೊಂಡರೆ ಯಾವ ಪುರುಷಾರ್ಥಕ್ಕಾಗಿ ಕುಳಿತುಕೊಳ್ಳಬೇಕೋ ನನಗೆ ಗೊತ್ತಿಲ್ಲ. ಆದ್ದರಿಂದ ತಾವೇನು ವಿನಂತಿ ಮಾಡಿದ್ದೀರಿ ಅದು ಬಹಳ ಸಾಧುವಾಗಿರತಕ್ಕದ್ದು ಮತ್ತು ಅವಶ್ಯವಾಗಿರತಕ್ಕದ್ದು. ನಾವು ಇವತ್ತು ಡಿಮಾಂಡ್ಗಳನ್ನು ಮುಗಿಸದಿದ್ದರೆ ಎಲ್ಲವನ್ನು ಗಿಲಿಟಿನ್‌ಗೆ ಹಾಕತಕ್ಕ ಪರಿಸ್ಥಿತಿ ಬರುತ್ತದೋ ಏನೋ. ಇನ್ನು ಅಪ್ರೊಪ್ರಿಯೇಷನ್ ಬಿಲ್ ಪಾಸ್ ಮಾಡಬೇಕಾಗುತ್ತದೆ. ಅದರ ಮೇಲೆ ಡಿಸ್ಕಷನ್ ಆಗಬೇಕಾಗುತ್ತದೆ. ಸರ್ಕಾರ ಹಣವನ ಖರ್ಚು ಮಾಡುವುದಕ್ಕೆ ನಾವು ವ್ಯವಸ್ಥೆ ಮಾಡಬೇಕಾಗುತ್ತದೆ. ಈವೊಂದು ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ತಾವು ವಿನಂತಿ ಮಾಡಿದ್ದೀರಿ. ನಾನು ಸಹ ಅದಕ್ಕೆ ಧ್ವನಿಗೂಡಿಸುತ್ತೇನೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಯಾರೂ ಹೇಳಿದರೂ ಕೇಳುತ್ತಿಲ್ಲ ಅವರದೇ ಆದ ಒಂದು ತರಹ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ. ಅವರು ನಮ್ಮೆಲ್ಲರ ವಿನಂತಿಗೆ ಮನ್ನಣೆ ಕೊಟ್ಟು ಭಾವಿಯಿಂದ ಮೇಲೆ ಬಂದು ಅವರ ಸ್ಥಾನದಲ್ಲಿ ಕುಳಿತು ಚರ್ಚೆಯಲ್ಲಿ ಭಾಗ ವಹಿಸುವುದು ಬಹಳ ಒಳ್ಳೆಯದು. ಆ ರೀತಿ ಮಾಡಬೇಕೆಂದು ನಾನು ಹೇಳುತ್ತೇನೆ. ಒಂದು ವೇಳೆ ಅವರು ಮೇಲೆ ಬಾರದಿದ್ದರೆ ನಾವು ಈ ಮಾತನ್ನು ಅನಿವಾರ್ಯವಾಗಿ ನೋವಿನಿಂದ ಹೇಳಬೇಕಾಗಿದೆ. ಈ ಸದನ ತನ್ನ ಕಾರ್ಯಕಲಾಪಗಳನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರು ಸಭೆಯನ್ನು ಅಡ್ಜರನ್ಡ್ ಮಾಡಬೇಕೆಂದು ಹೇಳುತ್ತಿದ್ದಾರೆ. ಅದು ಸಾಧುವಾದುದಲ್ಲ. Let us sit down and complete the demands.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಸಭೆಯನ್ನು ಮುಂದಕ್ಕೆ ಹಾಕಿಯೆಂದು ಹೇಳಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಇದನ್ನು ತಾವು ಒಪ್ಪುತ್ತೀರಿ. ಡಿಮ್ಯಾಂಡ್‌ಗಳನ್ನು ಗಿಲಿಟಿನ್‌ಗೆ ಹಾಕತಕ್ಕ ಪರಿಸ್ಥಿತಿಗೆ ಬಂದಿದ್ದೇವೆ. ನಾವು ಪ್ರತಿ ದಿನ ಇಲ್ಲಿಗೆ ಬಂದು ಸಹಿ ಹಾಕಿ ನೂರು ರೂಪಾಯಿ ಭತ್ಯವನ್ನು ತೆಗೆದುಕೊಂಡು ಹೋಗುತ್ತೇವೆ. ಸಾರ್ವಜನಿಕರ ಹಿತವನ್ನು ನಾವು ಸ್ವಲ್ಪವಾದರೂ ಯೋಚನೆ ಮಾಡುವುದು ಬೇಡವೆ? ಬ್ಯುರೋಕ್ರಸಿಗೆ ಇದೇ ಬೇಕಾಗಿದೆ. ಏನೂ ಡಿಸ್ಕಷನ್ ಮಾಡದಿದ್ದರೆ ಆ ತೊಂದರೆಗಳು ಹಾಗೆಯೇ ಹೋಗುತ್ತವೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಮ್ಮ ಅಭಿಪ್ರಾಯಗಳನ್ನು ನಾನು ಚಾಚುತಪ್ಪದೆ ಪಾಲನೆ ಮಾಡುತ್ತೇನೆ ಮತ್ತು ಒಪ್ಪುತ್ತೇನೆ. ಇಂತಹ ವಾತಾವರಣ ಸದನದಲ್ಲಿ ಸೃಷ್ಟಿಯಾಗಿದೆ. ಅದಕ್ಕಾಗಿ ಸಭೆಯನ್ನು ಅರ್ಧಗಂಟೆ ಮುಂದಕ್ಕೆ ಹಾಕಿದರೆ ಸಮಸ್ಯೆ ಬಗೆಹರಿಯಬಹುದೆಂದು ನನ್ನ ವಿಶ್ವಾಸ. ಅದಕ್ಕಾಗಿ ನಾನು ಹೇಳಿದೆ. ಅದಕ್ಕೆ ಒಪ್ಪುವುದಿಲ್ಲವೆಂದರೆ ನಾನೇನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಹೆಚ್ ರಂಗನಾಥ್ : ಸದನದ ಪರವಾಗಿ ಮಾನ್ಯ ಅಧ್ಯಕ್ಷರು ವಿನಂತಿ ಮಾಡಿಕೊಳ್ಳುತ್ತಾರೆಂದರೆ ಅದಕ್ಕೆ ಹೆಚ್ಚು ಮಹತ್ವವಿದೆ. ಇಡೀ ಸದನ ಅವರಿಗೆ ಒಪ್ಪಿಗೆ ಕೊಟ್ಟಿರುವಾಗ ಸದನದ ಪರವಾಗಿ ಅವರು ವಿನಂತಿ ಮಾಡಿಕೊಂಡರೆ ಅದಕ್ಕೆ ಹೆಚ್ಚು ಮಹತ್ವವಿದೆ. ಅದಕ್ಕೆ ನಮ್ಮದು ಭಿನ್ನಾಭಿಪ್ರಾಯವಿಲ್ಲ. ತಮ್ಮದೂ ಭಿನ್ನಾಭಿಪ್ರಾಯವಿಲ್ಲ. ಅವರು ವಿನಂತಿ ಮಾಡಿಕೊಳ್ಳುತ್ತಾರೆ. ಆ ವಿನಂತಿಗೆ ಏನೂ ಲಕ್ಷವಿಲ್ಲದ ಪರಿಸ್ಥಿತಿಗೆ ಬರುವುದಾದರೆ ಆ ರೀತಿ ಪರಿಗಣಿಸುವುದಾದರೆ ವಿಧಿಯಿಲ್ಲದೆ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ತಮ್ಮ ಸಲಹೆಗೆ ಬಿಡುತ್ತೇನೆ. ಒಂದು ಒಳ್ಳೆಯ ವಾತಾವರಣದಲ್ಲಿ ಪುನಃ ನಾವು ಸೇರಬಹುದು ಎನ್ನತಕ್ಕಂಥ ವಿಶ್ವಾಸ ಇದ್ದುದರಿಂದ ನಾನು ಹೇಳಿದೆ.

ಶ್ರೀ ಎ.ಕೆ. ಅನಂತಕೃಷ್ಣ : ವಾತಾವರಣ ಕುಲಗೆಡಿಸುವುದು ಮತ್ತೆ ವಾತಾವರಣ ಚೆನ್ನಾಗಿ ಕಲ್ಪಿಸಿಕೊಡಿ ಎಂದು ಹೇಳುವುದು ಬಹಳ ಚೆನ್ನಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಏನು ಹೇಳಿದ್ದೀರಿ. ಆ ಕೆಲಸ ನಾನು ಮಾಡಿಲ್ಲ. ಅದಷ್ಟು ತಿಳಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಇದು ಪ್ರತಿನಿತ್ಯ ಇದೆ. ಇಲ್ಲಿ ನಾವು ಹೇಗೆ ಎಂದರೆ ಕ್ಯಾಪ್ಟಿವ್ ಅಡಿಯನ್ಸ್ ಇದ್ದಹಾಗೆ. ನಾವು ಇದನ್ನೆಲ್ಲ ನೋಡುತ್ತಾ ಕುಳಿತುಕೊಳ್ಳಬೇಕು ಹೇಳಿದ್ದನ್ನೇ ಹೇಳುತ್ತಾ ಹೋದರೆ ಏನು ಮಾಡಬೇಕು?

(ಗೊಂದಲ)

ಶ್ರೀ ಬಿ.ಎಚ್. ಬನ್ನಿಕೋಡ್ : ಕೆಡಸಿದರೆ ಕೆಡುವ ಪೈಕಿ ಅಲ್ಲ ಅವರು

ಅಧ್ಯಕ್ಷರು : ಏನು ಮಾಡಬೇಕು ಎಂದು ಸಭೆಯ ಅಭಿಪ್ರಾಯಕ್ಕೆ ಬಿಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಸಭೆಯನ್ನು ಮುಂದುವರೆಸಿ. ನಮಗೆ ಮಾತನಾಡುವುದಕ್ಕೆ ಬಹಳ ವಿಷಯಗಳು ಇವೆ. ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿ ತರಬೇಕು ತಮ್ಮ ಇಷ್ಟ ಪ್ರಕಾರ ನಡೆಯಬೇಕು ಎನ್ನುವುದು ಇದೊಂದು ದುರುದ್ದೇಶ ಎಂದಷ್ಟೇ ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೇ ಬೇಕಾದರೆ ಸಭೆಯನ್ನು ಅರ್ಧಗಂಟೆ ಮುಂದೂಡಿ ಮಾನ್ಯ ಸದಸ್ಯರ ಜೊತೆಗೆ ....

ಶ್ರೀ ಆರ್.ವಿ. ದೇಶಪಾಂಡೆ : ಸಭೆಯನ್ನು ಅಡ್ಜರ್ನ್ ಮಾಡುವುದಕ್ಕೆ ತೊಂದರೆಯಾದರೆ ಸಭೆ ಬೇಕಾದರೆ ನಡೆಯಲಿ. ತಾವು ಬೇಕಾದರೆ ಅವರನ್ನು ತಮ್ಮ ಚೇಂಬರ್ಗೆ ಕರೆಸಿ ಮಾತನಾಡಿರಿ. ಅದನ್ನು ತಾವು ಮಾಡಬಹುದು.

ಅಧ್ಯಕ್ಷರು : ನೀವು ಮಾತನಾಡಿ. ವಿರೋಧ ಪಕ್ಷದ ಉಪನಾಯಕರನ್ನು ನಾನು ಒಳಗೆ ಕರೆದುಕೊಂಡು ಹೋಗುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಹಾಗೇ ಮಾಡಿ, ತೊಂದರೆ ಇಲ್ಲ. ಸಭೆ ನಡೆಯಲಿ.

Sri Qumarul islam : I think, the suggestion of the Hon. Member sri R.V. Deshpande is acceptable to everybody.

Mr. Speaker : A very useful suggestion. The House will continue and we can talk in my Chamber with our friends sitting in the well and decide as to what should be done further in the matter.

(ಗೊಂದಲ)

ಅಧ್ಯಕ್ಷರು : ಅದ್ದರಿಂದ ನೀವು ಪ್ರಾರಂಬ ಮಾಡಿ. ನಾನು ಒಳಗೆ ಹೋಗುತ್ತೇನೆ. ಅಲ್ಲಿಗೆ ಬನ್ನಿ ಎಂದು ಮಾನ್ಯ ಸದಸ್ಯರಿಗೆ ಆಮಂತ್ರಣ ಕೊಡುತ್ತೇನೆ. ನೀವು ಶುರು ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಸನ್ಮಾನ್ಯ ಅದ್ಯಕ್ಷರೇ, ಮತ್ತೂ ಒಂದು ಕೊನೆ ಬಾರಿ ಪ್ರಾರ್ಥನೆ ಮಾಡುತ್ತೇನೆ. ತಾವು ಒಂದು ಅವಕಾಶ ಮಾಡಿಕೊಡಬೇಕು. ಕೊನೆಯ ಒಂದು ಸಾರಿ ಪ್ರಯತ್ನ ಮಾಡೋಣ. ಫಲಾಫಲಗಳು ಬೇರೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರ ಸೂಚನೆಗೆ ಸಭೆ ದಯವಿಟ್ಟು ಮನ್ನಣೆ ಕೊಡಬೇಕು. ಮಾನ್ಯ ರಂಗನಾಥ್‌ರವರೇ, ಅವರು ಒಂದು ಅವಕಾಶ ಕೇಳುತ್ತಿದ್ದಾರೆ. ಸಭೆಯನ್ನು ಅರ್ಧಗಂಟೆ ಕಾಲ ಮುಂದೂಡಿ ನಾನು ಅವರ ಜೊತೆಯಲ್ಲಿ ಮಾತನಾಡುತ್ತೇನೆ. ಈಗ ಸಭೆ ಮುಂದುವರೆದು ಪುನಃ 2-15 ಗಂಟೆಗೆ ಸಮಾವೇಶವಾಗುತ್ತದೆ.

(ಸದನವು ಪುನಃ 2 ಗಂಟೆ 35 ನಿಮಿಷಕ್ಕೆ ಸಮಾವೇಶಗೊಂಡಿತು)

ಸಭಾಧ್ಯಕ್ಷರಾದ ಶ್ರೀ ಎಸ್.ಎಂ. ಕೃಷ್ಣರವರು ಪೀಠದಲ್ಲಿ ಉಪಸ್ಥಿತಿರಿದ್ದರು

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೆ, ತಾವು ಇಂದಿನ ಕಲಾಪಗಳು ಸುಸೂತ್ರವಾಗಿ ನಡೆಯುವುದಕ್ಕೆ ತಮ್ಮ ಪ್ರಭಾವವನ್ನು ಬೀರಿದ್ದೀರಿ. ಅದಕ್ಕಾಗಿ ಮೊದಲು ಸದನದ ವತಿಯಿಂದ ತಮಗೆ ನನ್ನ ಅಭಿನಂದನೆಗಳನ್ನು ಸಮರ್ಪಣೆ ಮಾಡುತ್ತಾ ಮಾನ್ಯ ಯಡಿಯೂರಪ್ಪನವರು ಮತ್ತು ಅವರ ಮಿತ್ರರು ಶ್ರೀ ವಾಟಾಳ್ ನಾಗರಾಜ್‌ವರು ತಮ್ಮ ಸಲಹೆ ಮೇಲೆ ಸದನದಲ್ಲಿ ಪಾಲ್ಗೊಳ್ಳಬೇಕೆಂದು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದಕ್ಕೂ ಮುನ್ನ ಅಲ್ಲಿ ನಡೆದಿರತಕ್ಕಂಥ ಮತ್ತು ಒಟ್ಟಾರೆ ರೂಪಿತವಾಗಿರತಕ್ಕ ಅಭಿಪ್ರಾಯವನ್ನು ತಾವೇ ಪರಿಶೀಲಿಸುವುದು ಸೂಕ್ತವೆಂದು ನನ್ನ ಭಾವನೆ.

ಅಧ್ಯಕ್ಷರು : ಈಗ ಹೇಗಿದ್ದರೂ ದೆಹಲಿಗೆ ನಿಯೋಗ ಹೋಗುತ್ತಿದೆ. ಆ ನಿಯೋಗ ದೆಹಲಿಗೆ ಹೋಗಿ ವಾಪಸ್ ಬಂದಮೇಲೆ ನಿಮಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ನಡೆದ ಮಾತು ಕತೆಗಳೆಲ್ಲವೂ ಗೊತ್ತಾಗುತ್ತದೆ. ಆದುದರಿಂದ ದೆಹಲಿಗೆ ನಿಯೋಗ ಹೋಗಿಬಂದಮೇಲೆ ಸರ್ಕಾರ ಈ ಸಾಲಮನ್ನಾ ವಿಚಾರದಲ್ಲಿ ಸ್ಪಷ್ಟವಾದಂತಹ ಸೂಚನೆಯನ್ನು ಈ ಸದನಕ್ಕೆ ಒದಗಿಸುವುದಕ್ಕೆ ನಾನು ಅವಕಾಶವನ್ನು ಮಾಡಿಕೊಡುತ್ತೇನೆ. ಆದುದರಿಂದ ದಯಮಾಡಿ ಮಾನ್ಯ ಸದಸ್ಯರೆಲ್ಲರೂ ಬಂದು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅದ್ಯಕ್ಷರೆ, ತಾವು ತಮ್ಮ ಕೊಠಡಿಗೆ ನಮ್ಮನ್ನು ಕರೆದು ಸರ್ಕಾರದ ಜೊತೆಯಲ್ಲಿ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟು ಕೇಂದ್ರ ಸರ್ಕಾರಕ್ಕೆ ವಿರೋಧ ಪಕ್ಷದ ನಾಯಕರು, ಆಡಳಿತಪಕ್ಷದ ಮುಖಂಡರು ಒಂದು ನಿಯೋಗ ಹೋಗಿ ಬಂದಮೇಲೆ ಈ ರೈತರ ಸಾಲಮನ್ನಾದ ಬಗ್ಗೆ ಸರ್ಕಾರದ ಸ್ಪಷ್ಟವಾದಂತಹ ನಿಲುವು ಏನು ಎನ್ನುವುದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತಾರೆಂದು ತಾವು ಭರವಸೆಯನ್ನು ಕೊಟ್ಟಿದ್ದೀರಿ. ಆ ರೀತಿ ಮಾತುಕತೆ ಸೌಹಾರ್ದಯುತವಾಗಿ ನಡೆಯಲು ತಾವು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಸ್ವಾಮಿ ಇಷ್ಟೇ ಇವತ್ತು ನಾವು ವಿರೋಧಪಕ್ಷದಲ್ಲಿ ಕುಳಿತುಕೊಂಡು ಸರ್ಕಾರ ಶಕ್ತಿಮೀರಿ ಈ ರೈತರ ಸಾಲ ಮನ್ನಾದ ಬಗ್ಗೆ ಏನು ಅಶ್ವಾಸನೆಯನ್ನು ಕೊಟ್ಟಿದೆಯೋ ಅದನ್ನು ಈಡೇರಿಸುವ ದೃಷ್ಟಿಯಿಂದ ಈ ಪ್ರಜಾತಂತ್ರ

ವ್ಯವಸ್ಥೆಯಲ್ಲಿ ಶಾಸನಸಭೆಯೊಳಗೆ ಏನೇನು ಮಾಡಲು ಸಾಧ್ಯವೋ ಅದೆಲ್ಲವನ್ನೂ ಮಾಡಲು ನಾವು ಪ್ರಯತ್ನ ಮಾಡುತ್ತೇವೆ.

ಈವತ್ತು ಸರ್ಕಾರಕ್ಕೆ ತಮ್ಮ ಮುಖಾಂತರ ಮತ್ತೊಮ್ಮೆ ಪ್ರಾರ್ಥನೆ ಮಾಡುವುದೇನೆಂದರೆ ನಾವು ಏನು ಆಶ್ವಾಸನೆಯನ್ನು ಕೊಟ್ಟಿದ್ದೇವೋ ಅದನ್ನು ನಂಬಿಕೊಂಡು ಕುಳಿತಿರುವ ರೈತ ಸಮೂದಾಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವ ರೀತಿಯಲ್ಲಿ 10 ಸಾವಿರ ರೂಪಾಯಿಗಳವರೆಗಿನ ರೈತರು ಕೂಲಿ ಕಾರ್ಮಿಕರು ಕೃಷಿ ಕಾರ್ಮಿಕರು ನೇಕಾರರು ಇಂತಹವರು ಏನು ಇದ್ದಾರೆ ಅವರ ಸಾಲವನ್ನು ಮನ್ನಾ ಮಾಡುವುದರ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಂಡು ಅವರ ಒಳಿತಿಗೋಸ್ಕರ ಅನುಕೂಲಕರವಾದ ಒಂದು ತೀರ್ಮಾನವನ್ನು ರಾಜ್ಯಸರ್ಕಾರದವರು ತೆಗೆದುಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ. ಆ ರೀತಿ ಕ್ರಮವನ್ನು ತೆಗೆದುಕೊಳ್ಳಲು ತಾವು ಸರ್ಕಾರದ ಮೇಲೆ ಒತ್ತಾಯವನ್ನು ತರಲು ಪ್ರಯತ್ನವನ್ನು ಮಾಡಬೇಕು ಮತ್ತು ರೈತರ ಸಮೂಹವನ್ನು ಉಳಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಉಳಿದಂತಹ ಸಾಲವನ್ನು ಮನ್ನಾ ಮಾಡಬೇಕೋ ಅಥವಾ ಬಿಡಬೇಕೋ ಎಂಬ ವಿಚಾರ ಸರ್ಕಾರಕ್ಕೆ ಬಿಟ್ಟಿದ್ದು.

ಆದರೆ ನಾವು ವಿರೋಧಪಕ್ಷದಲ್ಲಿ ಕುಳಿತುಕೊಂಡು ನಮ್ಮ ಕರ್ತವ್ಯ ಮಾಡುವ ದೃಷ್ಟಿಯಿಂದ ಅದನ್ನು ಮಾಡಿದ್ದೇವೆ. ಆ ಒಂದು ಹೋರಾಟದಲ್ಲಿ ಕೆಲಸ ಮಾಡತಕ್ಕ ಸಂದರ್ಭದಲ್ಲಿ ತಮ್ಮ ಮನಸ್ಸಿಗೆ ಸ್ವಲ್ಪ ನೋವಾಗಿರಬಹುದು. ಆದರೆ ಯಾವುದೇ ಕಾರ್ಯಕಲಾಪಗಳನ್ನು ಅಡ್ಡಿಮಾಡಬೇಕೆಂಬುದು ನಮ್ಮ ಉದ್ದೇಶವಲ್ಲ. ಕೋಟ್ಯಾಂತರ ಜನ ರೈತರ ಸಮಸ್ಯೆ ಬಂದಾಗ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಧರಣಿ, ಸತ್ಯಾಗ್ರಹ ಮಾಡುವಂತಹದ್ದು ಅನಿವಾರ್ಯವಾಗಿದೆ. ಆದುದರಿಂದ ಅದನ್ನು ನಾವು ಮಾಡಿದ್ದೇವೆ. ಆ ಒಂದು ಮಾತುಕತೆಗೆ, ಒಂದು ತೀರ್ಮಾನಕ್ಕೆ ಬರಲು ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ಮತ್ತೊಮ್ಮೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತು ರೈತರಿಗೆ ಅನುಕೂಲಕರವಾದ ಒಂದು ತೀರ್ಮಾನವನ್ನು ಮತ್ತು ಸರ್ಕಾರ ಈ ಬಗ್ಗೆ ಒಂದು ಸ್ಪಷ್ಟ ನಿಲುವನ್ನು ಪ್ರಕಟಿಸಲೆಂದು ಮತ್ತೊಮ್ಮೆ ಒತ್ತಾಯವನ್ನು ತರುತ್ತಾ ನನ್ನ ಮತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೆ, ಅನೇಕ ಸಂದರ್ಭಗಳಲ್ಲಿ ನಮ್ಮ ರಕ್ಷಣೆಗೆ ತಾವು ಬಂದಿದ್ದೀರಿ. ಇದು ಒಂದು ಬಹಳ ಪ್ರಮುಖವಾದ ವಿಚಾರ ಹೊಸದಾಗಿ ಶಾಸನಸಭೆ ಪ್ರಾರಂಭವಾದಾಗಿನಿಂದಲೂ ಈ ರೈತರ ಸಮಸ್ಯೆಯ ಬಗ್ಗೆ ಒಂದಲ್ಲಾ ಒಂದು ರೀತಿಯಲ್ಲಿ ಇಲ್ಲಿ ಚರ್ಚೆಗೆ ಬರುತ್ತಿವೆ. ಧರಣಿಯಾಗಿದೆ. ಈಪೊತ್ತು ಇದರ ಬಗ್ಗೆ ಸರ್ಕಾರ ಯಾವುದಾದರೊಂದು ನಿರ್ಣಯಕ್ಕೆ ಬರಬೇಕಾದದ್ದು ಅದರ ಕರ್ತವ್ಯ. ಏಕೆಂದರೆ ರೈತರು ಇಂದು ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಈ ಕಡೆ ಮೇಲೂ ಇಲ್ಲ, ಕೆಳಗೂ ಇಲ್ಲ. ಅವರು ತಮ್ಮ ಅಸ್ತಿತ್ವ ಏನು ಎನ್ನತಕ್ಕ ಪರಿಸ್ಥಿತಿಯಲ್ಲಿದ್ದಾರೆ. ಆ ಒಂದು ಉದ್ದೇಶದಿಂದ ಈವತ್ತು ಪ್ರತಿಷ್ಠೆಯಾಗಿ ಮಾಡಿಕೊಂಡು ಇಲ್ಲಿ ಧರಣಿಯನ್ನು ಮಾಡತಕ್ಕದ್ದು ನಮ್ಮ ಉದ್ದೇಶವಲ್ಲ. ಈ ಸಮಸ್ಯೆ ಹೇಗಾದರೂ ಬಗೆಹರಿಸಬೇಕು. ರೈತರಿಗೆ ಅನುಕೂಲವಾಗತಕ್ಕಂತಹ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುವ ದಿಸೆಯಲ್ಲಿ ನಾವು ಧರಣಿ ಮಾಡಿದ್ದೇವೆ. ಆದರೆ ಸಭೆಯ ಕಾಲ ಹರಣ ಮಾಡುವ ಉದ್ದೇಶ ನಮ್ಮದಲ್ಲ, ಇದು ಜನರ ಸ್ವತ್ತೇ ಜನರ ಸಮಸ್ಯೆ ರೈತರ ಸಮಸ್ಯೆಯಾಗಿರುರುವುದರಿಂದ ಈ ಧರಣಿ ಮಾಡಿದ ಉದ್ದೇಶ ಕಾಲ ಹರಣ ಮಾಡಬೇಕೆಂಬುದಲ್ಲ. ಆದರೂ ಈವತ್ತು ತಾವು ಏನು ಸಲಹೆಯನ್ನು ಕೊಟ್ಟಿದ್ದೀರೋ

ಈ ಒಂದು ನಿಯೋಗ ದೆಹಲಿಗೆ ಹೋಗಿ ಬಂದಮೇಲೆ ಕೇಂದ್ರಸರ್ಕಾರದ ಅಭಿಪ್ರಾಯವೇನು ಎಂಬುದು ಸರ್ಕಾರಕ್ಕೆ ಗೊತ್ತಾಗುತ್ತದೆ.

ಸರ್ಕಾರದವರು ಈ ಸಭೆಯಲ್ಲಿ ಸ್ಪಷ್ಟವಾದ ನಿಲುವನ್ನು ಪ್ರಕಟಿಸಬೇಕು. ಈ ಒಂದು ಸಂಧಾನದಲ್ಲಿ ತಾವು ಕೈಗೊಂಡ ಕ್ರಮಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ನಮ್ಮ ವಿರೋಧ ಪಕ್ಷದ ನಾಯಕರು ಇದಕ್ಕೆ ಮುಕಂಡತ್ವವನ್ನು ವಹಿಸಿ ಒಂದು ತೀರ್ಮಾನಕ್ಕೆ ಬಂದುದಕ್ಕೆ ಅವರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್: ಸನ್ಮಾನ್ಯ ಅಧ್ಯಕ್ಷರೆ ಈಗಾಗಲೇ ತಾವು ದೆಹಲಿಯಿಂದ ನಿಯೋಗ ಬಂದ ಮೇಲೆ ಹೇಳಿಕೆಯನ್ನು ಕೊಡಬೇಕೆಂದು ಅಪ್ಪಣೆ ಕೊಡಿಸಿದ್ದೀರಿ. ಅದರಂತೆ ಸರ್ಕಾರ ಆಶ್ವಾಸನೆಯನ್ನು ಕೊಡುತ್ತದೆಂದು ಸರ್ಕಾರದ ಪರವಾಗಿ ಹೇಳುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಲೋಕೋಪಯೋಗಿ ವಿದ್ಯುಚ್ಛಕ್ತಿ ಮೀನುಗಾರಿಕೆ ನೀರಾವರಿ ಇಲಾಖೆಗಳು)

+ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಸದನದ ಮುಂದೆ ಇರತಕ್ಕಂಥ ಅನೇಕ ಬೇಡಿಕೆಗಳ ಮೇಲೆ ಅದರಲ್ಲೂ ವಿಶೇಷವಾಗಿ ಲೋಕೋಪಯೋಗಿ, ವಿದ್ಯುಚ್ಛಕ್ತಿ ಮತ್ತಿತರ ಬೇಡಿಕೆಗಳ ಬಗ್ಗೆ ನನ್ನ ಪ್ರಾರಂಭಿಕ ಅನಿಸಿಕೆಯನ್ನು ಪ್ರಸ್ತಾಪಮಾಡಿದ್ದೇನೆ. ತಮ್ಮ ಅನುಮತಿಯನ್ನು ಪಡೆದು ವಿದ್ಯುಚ್ಛಕ್ತಿ ಯೋಜನೆಗಳನ್ನು ಹೇಳುವ ಮುನ್ನ ಲೋಕೋಪಯೋಗಿ ಇಲಾಖೆಗೆ ಸೇರಿದಂಥ ಒಂದು ಮಾಹಿತಿಯೂ ನನಗೆ ಸಿಗಲಿಲ್ಲ. ಆದುದರಿಂದ ಅದನ್ನು ಪುನಃ ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಅಧ್ಯಕ್ಷರೆ ನಿನ್ನೆ ಪ್ರಾರಂಭಿಕವಾಗಿ ಇರಿಗೇಷನ್ ಮತ್ತು ಪಿ.ಡಬ್ಲ್ಯು.ಡಿ ಇಲಾಖೆಯ ಬೈಫರ್‌ಕೇಷನ್ ಬಗ್ಗೆ ಪ್ರಯತ್ನ ನಡೆಯುತ್ತಾ ಇದೆ ಎಂದು ಹೇಳಿದ್ದೇನೆ. ಇದರಿಂದ ಆಗಬಹುದಾದ ತೊಂದರೆಗಳ ವಿವರವನ್ನು ಈ ಸದನದಲ್ಲಿ ಪ್ರಸ್ತಾಪಮಾಡಿದ್ದೇನೆ. ಮಾನ್ಯ ನೀರಾವರಿ ಸಚಿವರು ಇಲ್ಲಿ ಇದ್ದಾರೆ. ಅವರ ಗಮನಕ್ಕೆ ಇನ್ನೊಂದು ವಿಚಾರವನ್ನು ಇಲ್ಲಿ ತರಬೇಕು. ದಿನಾಂಕ 3-8-91, 9-8-91 ಮತ್ತು 23-8-91 ಹೀಗೆ ಅನೇಕ ಬಾರಿ ಸೆಕ್ರೆಟರಿ-1, ಕಾಡಾ ಅವರು ಒಂದು ವರ್ಗಾವಣೆ ಆಜ್ಞೆಯನ್ನು ಹೊರಡಿಸಿದರು. ಈ ಆಜ್ಞೆಗೆ 23-3-1991ರವರೆಗೆ ಎಷ್ಟು ಇಂಥ ಅರ್ಜಿಗಳಾದವು. ಈ ಆಜ್ಞೆ ಇದುವರೆಗೆ ಜಾರಿಗೆ ಏಕೆ ಬರಲಿಲ್ಲ. ಹೀಗೆ ಜಾರಿಗೆ ಬರದೇ ಇರುವುದಕ್ಕೆ ಕಾರಣ ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಸೆಕ್ರೆಟರಿ 1 ಮತ್ತು ಸೆಕ್ರೆಟರಿ 2 ಅವರಲ್ಲಿ ಇರತಕ್ಕ ಅಧಿಕಾರದ ಹಸ್ತಾಂತರದ ಪ್ರಯತ್ನದ ಫಲವಾಗಿ ಸೆಕ್ರೆಟರಿ 1ರವರು ವರ್ಗಾವಣೆ ಆಜ್ಞೆ ಮಾಡುವುದು.

ಸೆಕ್ರೆಟರಿ 2ರವರು ವರ್ಗಾವಣೆಯನ್ನು ನಿಲ್ಲಿಸುವುದು. ಈ ಕೆಲಸ ಇಲ್ಲಿ ನಡೆಯುತ್ತಾ ಇದೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ ಹೀಗಾದರೆ ಹೇಗೆ? 1991ರ ಆಗಸ್ಟ್ ತಿಂಗಳಲ್ಲಿ ಎಷ್ಟು ವರ್ಗಾವಣೆಗೆ ಆಜ್ಞೆಗಳಾದುವು. ಅದಕ್ಕೆ ಪೂರ್ವಭಾವಿಯಾಗಿ ಆಗಸ್ಟ್ ತಿಂಗಳಲ್ಲಿ ನಡೆದಿರತಕ್ಕಂಥ ವರ್ಗಾವಣೆಗಳು ಎಷ್ಟು? ವರ್ಗಾವಣೆಯನ್ನು ಯಾಕೆ ಜಾರಿಗೆ ಕೊಟ್ಟಿಲ್ಲ. ಕೊಡದೇ ಇರುವುದರಿಂದ ಉಂಟಾಗಿರತಕ್ಕಂಥ ಪರಿಸ್ಥಿತಿಯೇನು? ವರ್ಗಾವಣೆ ಆಜ್ಞೆ ಹೋಗಿದೆ ಅವರ ಸ್ಟೇ ಆರ್ಡರ್ ಆಗಿದೆ ಅವರು ಅಲ್ಲೂ ಇಲ್ಲ ಇಲ್ಲೂ ಇಲ್ಲ. ಆದರೆ ಸರ್ಕಾರದ ಬೊಕ್ಕಸಕ್ಕೆ ಮಾತ್ರ ದುಡ್ಡು ಖರ್ಚಾಗುತ್ತಾ